# ಕನ್ನಡ ಪೌರಾಣಿಕ ಕಾದಂಬರಿಕಾರರು

## ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ ......

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ, ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾ ಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ಸ್ವತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೬೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯವು ಕನ್ನಡದ ಮಹತ್ವದ ಲೇಖಕರನ್ನು, ಕಲಾವಿದರನ್ನು, ವಿಜ್ಞಾನಿಗಳನ್ನು ಹಾಗೂ ಸಾಹಿತ್ಯ ಮತ್ತು ಸಾಹಿತ್ಯೇತರವಾದ ಪ್ರಮುಖ ವಿಷಯಗಳನ್ನು ಕುರಿತು ಸಾಮಾನ್ಯ ಜನರಿಗೆ ತಿಳುವಳಿಕೆ ನೀಡಲು ಪ್ರಸಾರೋಪನ್ಯಾಸಗಳನ್ನು ಮಾಡಿಸುವ ಯೋಜನೆಗಳನ್ನು ರೂಪಿಸಿಕೊಂಡು ಅದರಂತೆ ಕಾರ್ಯನಿರ್ವಹಿಸುತ್ತಿದೆ. ಅತ್ಯಂತ ಸರಳವಾಗಿ ಈ ವಿಷಯಗಳನ್ನು ಕುರಿತು ಪರಿಚಯ ಮಾಡಿಕೊಡುವ ಈ ಉಪನ್ಯಾಸಗಳನ್ನು ಪುಸ್ತಕಗಳ ಮೂಲಕವಾಗಿ ಪ್ರಕಟಿಸುತ್ತಿದೆ. ಈ ಉಪನ್ಯಾಸ ಮಾಲೆ ಮತ್ತು ಅದರ ಉತ್ಪನ್ನಗಳಾದ ಈ ಚಿಕ್ಕ ಹೊತ್ತಿಗೆಗಳು ತುಂಬ ಜನಪ್ರಿಯವಾಗಿವೆ. ಈ ಮಾಲೆಯಲ್ಲಿ ಪ್ರಸ್ತುತ ಪುಸ್ತಕ ಪ್ರಕಟವಾಗುತ್ತಿದೆ.

'ಕನ್ನಡ ಪೌರಾಣಿಕ ಕಾದಂಬರಿಕಾರರು' ಎಂಬ ಕಿರುಹೊತ್ತಿಗೆಯನ್ನು ಈ ಮಾಲೆಗಾಗಿ ಬರೆದುಕೊಟ್ಟಿರುವ ಡಾ. ಜಿ.ಕೆ. ರಮೇಶ ಅವರಿಗೆ ವಿಶ್ವವಿದ್ಯಾಲಯದ ಕೃತಜ್ಞತೆಗಳು ಸಲ್ಲುತ್ತವೆ.

**ಡಾ. ಎಚ್.ಜೆ. ಲಕ್ಕಪ್ಪಗೌಡ**
ಕುಲಪತಿಗಳು

# ಕನ್ನಡ ಪೌರಾಣಿಕ ಕಾದಂಬರಿಕಾರರು

**ಪ್ರವೇಶ**

ಕಾದಂಬರಿ ಆಧುನಿಕ ಸಾಹಿತ್ಯದ ಪ್ರಮುಖ ಪ್ರಕಾರ. ಕಥನಾತ್ಮಕತೆ ಮತ್ತು ಸೊಭಗತೆಗಳಿಂದಾಗಿ ಅತ್ಯಂತ ಜನಪ್ರಿಯ ರೂಪವೂ ಹೌದು. ಒಂದು ಶತಮಾನದ ಇತಿಹಾಸವುಳ್ಳ ಕನ್ನಡ ಕಾದಂಬರಿಯಲ್ಲಿ ಸಾಮಾಜಿಕ, ಐತಿಹಾಸಿಕ, ಪತ್ತೇದಾರಿ ಮುಂತಾಗಿ ವಿವಿಧ ವಸ್ತುಗಳನ್ನಾಧರಿಸಿದ ಕೃತಿಗಳಿವೆ. ಪೌರಾಣಿಕ ಕಾದಂಬರಿ ಎಂಬ ವಿಭಾಗವೊಂದು ಕನ್ನಡದಲ್ಲಿ ಇದೆಯಾದರೂ ಈಚಿನವರೆಗೂ ಅದು ವಿಮರ್ಶಕರ ಪರಿಗಣನೆಗೆ ಬಂದಿರಲಿಲ್ಲವೆನ್ನಬೇಕು. ಈಚೆಗೆ ಪೌರಾಣಿಕ ಕಾದಂಬರಿಗಳನ್ನು ಪ್ರತ್ಯೇಕವಾಗಿ ಗುರಿತಿಸಲಾಗುತ್ತಿದೆ.

ಪರಂಪರೆಯಲ್ಲಿ ಬಳಕೆಯಲ್ಲಿದ್ದ ಪ್ರಸಿದ್ಧ ಪುರಾಣಗಳಿಂದ ವಸ್ತುಗಳನ್ನಾಯ್ದುಕೊಂಡು ಅದಕ್ಕೆ ಆಧುನಿಕ ಕಾದಂಬರಿಯ ಸ್ವರೂಪವನ್ನು ನೀಡಿ ಬರೆದ ಸಾಹಿತ್ಯ ಕೃತಿಗಳು ಕನ್ನಡದಲ್ಲಿ ಈಗ್ಗೆ ಸುಮಾರು ಐವತ್ತು ವರ್ಷಗಳಿಂದ ಪ್ರಕಟವಾಗುತ್ತಾ ಬಂದಿವೆ. ನವೋದಯ ಕಾಲದಲ್ಲಿ ಇಂಗ್ಲಿಷ್ ಅನುಸರಣೆಯಾಗಿ ಕಾದಂಬರಿ ಕನ್ನಡಕ್ಕೆ ಬಂತು. ಮೊದಲ ಹಂತದಲ್ಲಿ ಅನುವಾದಿತ ಕಾದಂಬರಿಗಳು ಕಾಣಿಸಿಕೊಂಡು ನಂತರ ಸ್ವತಂತ್ರ ಸಾಮಾಜಿಕ ಕಾದಂಬರಿಗಳ ಸೃಷ್ಟಿಗೆ ಕನ್ನಡ ಲೇಖಕರು ತೊಡಗಿಕೊಂಡರೆಂಬುದನ್ನು ಸಾಹಿತ್ಯಾಭ್ಯಾಸಿಗಳು ಬಲ್ಲರು. ಕಾದಂಬರಿಯ ಉದಯ ಕಾಲದಲ್ಲಿ ಪೌರಾಣಿಕ ಕಾದಂಬರಿ ಎಂದು ಕರೆಸಿಕೊಳ್ಳುವ ಯಾವುದೇ ಕೃತಿ ಕನ್ನಡದಲ್ಲಿ ರಚನೆಯಾಗಲಿಲ್ಲ. ಅಷ್ಟೇಕೆ ಕಾದಂಬರಿ ಬೆಳವಣಿಗೆಯ ಹಂತದಲ್ಲೂ ಇವು ಕಾಣಿಸಿಕೊಳ್ಳಲಿಲ್ಲ. ಆದಾಗ್ಯೂ ಆ ಮೊದಲೇ ಅಂದರೆ ನವೋದಯ ಕಾಲದಲ್ಲೇ ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲಿ-ಪರಂಪರೆಯಲ್ಲಿದ್ದ ಕಾಲ್ಪನಿಕ ಕಥಾನಕಗಳನ್ನು ಆಯ್ದುಕೊಂಡು ಅದ್ಭುತ ರಮ್ಯ ಘಟನಾವಳಿಗಳನ್ನು ಹೆಣೆದು ರಚಿಸಿದ ಯಾದವ ಕವಿ ವಿರಚಿತ 'ಕಲಾವತಿ ಪರಿಣಯ' (೧೮೧೫) ಮುಮ್ಮಡಿ ಕೃಷ್ಣರಾಜ ಒಡೆಯ ಕೃತ 'ಸೌಗಂಧಿಕಾ ಪರಿಣಯ' (೧೮೨೦) ಕೆಂಪುನಾರಾಯಣನ 'ಮುದ್ರಾ ಮಂಜೂಷ' (೧೮೨೩) ಎಂಬ ಮೂರು ಕೃತಿಗಳು ಸೃಷ್ಟಿಯಾದವು. ಇವುಗಳಲ್ಲಿ ಪೌರಾಣಿಕ ಕಾದಂಬರಿಗಳ ಸ್ಥೂಲ ಲಕ್ಷಣಗಳನ್ನು ಕಾಣಬಹುದಾಗಿದೆ. ಇವುಗಳ ಬೆನ್ನಿಗೇ ಸ್ಪಷ್ಟ ರೂಪದಲ್ಲಿ ಕಾದಂಬರಿ ಹುಟ್ಟಿ ಬರದಿದ್ದರೂ ಪುರಾಣ ಕಥಾನಕಗಳು ಹೇರಳವಾಗಿ ಹೊಮ್ಮಿಬಂದವು. ೧೯೫೦ರಲ್ಲಿ ದೇವುಡು ನರಸಿಂಹ ಶಾಸ್ತ್ರೀಗಳು 'ಮಹಾಬ್ರಾಹ್ಮಣ'ವನ್ನು ಪ್ರಕಟಿಸುವವರೆಗೆ ಪೌರಾಣಿಕ ಕಾದಂಬರಿ ಎಂಬ ಪ್ರತ್ಯೇಕ ರೂಪ ಇರಲಿಲ್ಲವಾದರೂ ಆಂಗ್ಲ ಭಾಷೆಯ ಪ್ರಭಾವ ಮತ್ತು ಅನುಕರಣೆಗೆ ಹೊರತಾದ (ಇಂಗ್ಲಿಷಿನಲ್ಲಿ ಇಂಥ ರೂಪವೊಂದು ಇದ್ದಂತೆ ತೋರುವುದಿಲ್ಲ) ಭಾರತೀಯ ಪರಂಪರೆಯ ಕೊಡುಗೆ ಎನ್ನಬಹುದಾದ ಪೌರಾಣಿಕ ಕಾದಂಬರಿ ರೂಪ

ನವೋದಯ ಪೂರ್ವಕಾಲದಲ್ಲೇ ಮೊಳಕೆಯೊಡೆದಿದ್ದು ಇಪ್ಪತ್ತನೇ ಶತಮಾನದ ಮಧ್ಯಕಾಲದವರೆಗೆ ಪುರಾಣ ಕಥಾನಕಗಳ ರೂಪದಲ್ಲಿ ಗುಪ್ತಗಾಮಿನಿಯಾಗಿದ್ದು ಭಾರತ ಸ್ವಾತಂತ್ರ್ಯಾ ನಂತರ ದಾಂಗುಡಿಯಿಟ್ಟು ಚಿಗುರೊಡೆಯಿತೆಂದು ಹೇಳಬಹುದಾಗಿದೆ.

ಯಾವುದೇ ಭಾಷೆಯ ಸಾಹಿತ್ಯಕ್ಕೆ ಪುರಾಣಗಳು ಆಕರ ರೂಪದ ಸಾಹಿತ್ಯವಾಗಿರುತ್ತವೆ. ಪುರಾಣಗಳ ಪ್ರಸಂಗ, ವ್ಯಕ್ತಿಗಳನ್ನು ಪ್ರತಿಮೆ, ಪ್ರತಿಕೃತಿ, ರೂಪಕಗಳಾಗಿ ಬಳಸಿಕೊಂಡು ಹೆಣೆದ ಕಾವ್ಯ, ಕವಿತೆ, ನಾಟಕಗಳು ಇರುವಂತೆಯೇ ಕತೆ, ಕಾದಂಬರಿಗಳೂ ಎಲ್ಲ ಭಾಷೆಗಳಲ್ಲಿರುತ್ತವೆ. ಕನ್ನಡದಲ್ಲಿಯೂ ಈ ಎಲ್ಲ ಪ್ರಸಿದ್ಧ ಸಾಹಿತ್ಯ ಪ್ರಕಾರಗಳಿಗಾಗಿ ಪುರಾಣಗಳನ್ನು ಬಳಸಿಕೊಳ್ಳಲಾಗಿದೆ. ಪುರಾಣಾಧಾರಿತ ಕನ್ನಡ ಕಾದಂಬರಿಗಳದೇ ಒಂದು ಪುಟ್ಟ ಪರಂಪರೆ ಇದೆ.

ಇದೊಂದು ವಿಶಿಷ್ಟ ಪ್ರಕಾರ. ರಾಮಾಯಣ, ಮಹಾಭಾರತ, ಭಾಗವತ ಪುರಾಣ ಕಥೆಗಳನ್ನೂ ವೇದೋಪನಿಷತ್ ಕಥಾಪ್ರಸಂಗಗಳನ್ನೂ ಇಡಿ ಇಡಿಯಾಗಿ ಅಥವಾ ಬಿಡಿ ಘಟನೆಗಳಾಗಿ ಕಾದಂಬರಿಗೆ ವಸ್ತುವಾಗಿರಿಸಿಕೊಂಡು ಆ ಕಥಾಭಿತ್ತಿಯಲ್ಲಿ ಕಾದಂಬರಿ ತಂತ್ರಮುಖೇನ ಸಮಕಾಲೀನ ಮೌಲ್ಯಗಳನ್ನೂ ಸಮಸ್ಯೆಗಳನ್ನೂ ಬಿಂಬಿಸುವ ಅಥವಾ ಪ್ರಾಚೀನ ಮೌಲ್ಯಗಳನ್ನು ಪುನಾ ಪ್ರತಿಪಾದಿಸುವ ಅಥವಾ ಪ್ರಾಚೀನ, ಆಧುನಿಕ ಸಮಾಜ ಹಾಗೂ ಸಾಮಾಜಿಕರನ್ನು ವಿಡಂಬಿಸುವ ಕೃತಿಗಳನ್ನು ಪೌರಾಣಿಕ ಕಾದಂಬರಿಗಳು ಎನ್ನಬಹುದು.

ಕನ್ನಡದಲ್ಲಿ ಬಹುಸಂಖ್ಯಾತರ ವೈದಿಕ ಪರಂಪರೆಯ ವೈಷ್ಣವ ಪುರಾಣಗಳನ್ನಾಧರಿಸಿದ ಕಾದಂಬರಿಗಳಲ್ಲದೆ ಜೈನ, ಬೌದ್ಧ ಮುಂತಾಗಿ ಇತರ ಧರ್ಮಗಳ ಪುರಾಣಗಳನ್ನಾಧರಿಸಿದ ಕಾದಂಬರಿಗಳೂ, ಇತರ ಭಾಷೆಗಳಿಂದ ಅನುವಾದಿಸಿದ ಕಾದಂಬರಿಗಳೂ ಇವೆ. ವೈದಿಕ ಪುರಾಣ ಮೂಲಕ ಕೃತಿಗಳೇ ಸಂಖ್ಯೆಯಲ್ಲಿ ಹೆಚ್ಚಾಗಿವೆ.

ಈ ಬಗೆಯ ಕೃತಿಗಳನ್ನು ರಚಿಸ ಹೊರಟವರಲ್ಲಿ ಧಾರ್ಮಿಕ ಶ್ರದ್ಧೆಭಕ್ತಿಗಳಿಂದ ಪುರಾಣಗಳನ್ನು ಪುನಾರಚಿಸಿ ಧರ್ಮ ಪ್ರಚಾರಕ್ಕೆ, ಸನಾತನ ಧರ್ಮಗಳ ಪುನರುದ್ಧಾರಕ್ಕೆ, ಪ್ರಾಚೀನ ಮೌಲ್ಯಗಳ ಪ್ರತಿಪಾದನೆಗೆ ಪಣತೊಟ್ಟವರು ಕೆಲವರು. ವೈಚಾರಿಕ ದೃಷ್ಟಿ ವೈಜ್ಞಾನಿಕ ಮನೋಭಾವಗಳಿಂದ ಪುರಾಣಗಳನ್ನು ಪರಿಶೀಲಿಸಿ ಅವುಗಳನ್ನು ಭಂಜಿಸಿ ಪುನಾ ಸೃಷ್ಟಿಸಿ, ಆಧುನಿಕ ಮೌಲ್ಯಗಳನ್ನೂ ಪ್ರಗತಿಗಾಮಿ ಆಲೋಚನೆಗಳನ್ನೂ ಬಿತ್ತರಿಸಲು ಯತ್ನಿಸುವವರು ಕೆಲವರು. ಪುರಾಣಗಳನ್ನು ಸಂಶೋಧನಾತ್ಮಕವಾಗಿ ಬಗೆದವರು ಕೆಲವರು. ವ್ಯಂಗ್ಯಕ್ಕೆ ಸಾಮಗ್ರಿಯಾಗಿಸಿಕೊಂಡವರು ಮತ್ತೆ ಕೆಲವರು. ಇಂಥ ಭಿನ್ನ ಮನೋಧರ್ಮದ ಲೇಖಕರಿಂದಾಗಿ ಪೌರಾಣಿಕ ಕಾದಂಬರಿಗಳು ವೈವಿಧ್ಯದಿಂದ ಕೂಡಿವೆ. ಈ ಪ್ರಕಾರದ ಇಪ್ಪತ್ತೈದು ಮುವತ್ತು ಸಂಖ್ಯೆ ಮೀರದ ಸಾಹಿತಿಗಳ ಚರಿತ್ರೆ ಚಾರಿತ್ರಗಳೂ ಕುತೂಹಲಕಾರಿಯಾಗಿವೆ.

ಕನ್ನಡದಲ್ಲಿ ಪೌರಾಣಿಕ ಕಾದಂಬರಿಗಳಿಂದಾಗಿಯೇ ಪ್ರಸಿದ್ಧರಾದವರು ದೇವುಡು ಮತ್ತು ಸತ್ಯಕಾಮರು ಮಾತ್ರ. ಅವರೂ ಕೂಡ ಈ ಬಗೆಯ ಕೃತಿಗಳಿಗೇ ಸೀಮಿತರಾದವರಾಗಲಿ ಮೀಸಲಾದವರಾಗಲಿ ಅಲ್ಲ, ಅಂಥವರು ಯಾರೂ ಕನ್ನಡದಲ್ಲಿಲ್ಲ. ಇತರ ಸಾಹಿತ್ಯ ಪ್ರಕಾರಗಳಲ್ಲಿ ಕೆಲಸ ಮಾಡುತ್ತ ಅಥವಾ ಕಾದಂಬರಿಯದೇ ಇತರ ವಿಭಾಗಗಳಲ್ಲಿ ಪ್ರಮುಖವಾಗಿ ಕೃಷಿ ಮಾಡುತ್ತ ಆನುಷಂಗಿಕವಾಗಿ ಒಂದೋ ಎರಡೋ ಪೌರಾಣಿಕ ಕಾದಂಬರಿ ಬರೆದವರೇ ಎಲ್ಲ. ಇವರಲ್ಲಿ ಕೆಲವರು ಸಿದ್ಧಹಸ್ತರು, ಸುಪ್ರಸಿದ್ಧರು. ಮತ್ತೆ ಕೆಲವರು ಅಷ್ಟೊಂದು ಪ್ರಸಿದ್ಧರಲ್ಲದ ಪ್ರಯತ್ನಶೀಲರು. ಒಬ್ಬಿಬ್ಬರು ಪೌರಾಣಿಕ ಕಾದಂಬರಿಗಳ ಮೂಲಕವೇ ಬರವಣಿಗೆ ಆರಂಭಿಸಿದವರು. ಈ ನಮ್ಮ ಸಾಹಿತಿಗಳ ವ್ಯಕ್ತಿತ್ವ ಸಾಧನೆಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಯತ್ನವನ್ನು ಈ ಕಿರುಹೊತ್ತಿಗೆಯಲ್ಲಿ ಮಾಡಲಾಗಿದೆ.

**ದೇವುಡು ನರಸಿಂಹಶಾಸ್ತ್ರಿ**

ಕನ್ನಡದಲ್ಲಿ ಪೌರಾಣಿಕ ಕಾದಂಬರಿಗಳ ಪರಂಪರೆಯನ್ನು ಪ್ರಾರಂಭಿಸಿದ ಖ್ಯಾತಿ ದೇವುಡು ಎಂಬ ಸಂಕ್ಷಿಪ್ತ ನಾಮದಿಂದ ಪ್ರಸಿದ್ಧರಾಗಿರುವ ನರಸಿಂಹಶಾಸ್ತ್ರಿಗಳಿಗೆ ಸಲ್ಲುತ್ತದೆ. ತಮ್ಮ ಮಹಾ ಬ್ರಾಹ್ಮಣ ಕಾದಂಬರಿಯ ಮೂಲಕ (೧೯೫೨) ಈ ಶತಮಾನದ ಮಧ್ಯದಲ್ಲಿ ಹೊಸ

ಸಾಹಿತ್ಯ ಪ್ರಕಾರವೊಂದರ ಹುಟ್ಟಿಗೆ ಕಾರಣರಾದವರು ದೇವುಡು. ನಂತರ ತಮ್ಮ ಇನ್ನೆರಡು ಮಹಾನ್ ಕಾದಂಬರಿಗಳ ಮೂಲಕ ಮಹಾಕ್ಷತ್ರಿಯ (೧೯೩೨) ಮಹಾದರ್ಶನ (೧೯೩೭) ಆ ಪರಂಪರೆಗೆ ಭದ್ರಬುನಾದಿಯನ್ನು ಹಾಕಿದರು. ಪೌರಾಣಿಕ ಕಾದಂಬರಿಗಳ ವಿಚಾರಕ್ಕೆ ದೇವುಡು ಪ್ರಾತಃ ಸ್ಮರಣೀ ಯರೆಂದೇ ಹೇಳಬಹುದು.

ಆಂಧ್ರ ಮೂಲದ ವೈದಿಕ ಸಂಪ್ರದಾಯಸ್ಥ ಮನೆತನವೊಂದರಲ್ಲಿ ಮೈಸೂರಿನಲ್ಲಿ ೧೮೯೬ರ ಡಿಸೆಂಬರ್ ೨೯ರಂದು ನರಸಿಂಹಶಾಸ್ತ್ರಿಗಳ ಜನನವಾಯಿತು. ತಾಯಿ ಸುಬ್ಬಮ್ಮ, ತಂದೆ ಕೃಷ್ಣಶಾಸ್ತ್ರಿಗಳು. ವಿದ್ವತ್ ಪರಿಸರ ದೇವುಡು ಅವರಿಗೆ ಬಾಲ್ಯದಲ್ಲೇ ದೊರಕಿತು. ವೈದಿಕ ಸಾಹಿತ್ಯದಲ್ಲಿ ಪರಿಣತರಾಗಿದ್ದ ತಂದೆಯವರ ಮಾರ್ಗದರ್ಶನ, ಸಂಸ್ಕೃತ ಪಾಂಡಿತ್ಯವುಳ್ಳ ಹಿರಿಯರ ಒಡನಾಟ ದೊರಕಿತ್ತಾಗಿ, ಚಿಕ್ಕಂದಿನಲ್ಲೇ ರಾಮಾಯಣಾದಿ ಪುರಾಣಗಳನ್ನು ಓದಿಕೊಂಡಿದ್ದರು. ನಂತರದಲ್ಲಿ ಆಂಗ್ಲಭಾಷೆ-ಸಾಹಿತ್ಯಗಳನ್ನು ಅರಗಿಸಿಕೊಂಡರು. ಮನೆಮಾತು ತೆಲುಗೂ ಸೇರಿದಂತೆ ಹಲವು ಭಾಷೆಗಳನ್ನು ಬಲ್ಲವರಾಗಿದ್ದ ದೇವುಡು ಕಳೆದ ಶತಮಾನದ ಎರಡನೇ ದಶಕದಲ್ಲೇ ಎಂ.ಎ. ಪದವಿ ಪಡೆದಿದ್ದರು. ಸಂಸ್ಕೃತ, ತತ್ವಶಾಸ್ತ್ರಗಳು ಇವರ ಉನ್ನತ ಶಿಕ್ಷಣದ ವಿಷಯಗಳಾಗಿದ್ದವು. ನಿಶಿತಮತಿಗಳಾಗಿದ್ದ ಶಾಸ್ತ್ರಿಗಳಿಗೆ ಡಾ. ಎಸ್. ರಾಧಾಕೃಷ್ಣನ್ ರಂಥ ಗುರುಗಳು ದೊರಕಿದ್ದರು.

ಇಷ್ಟೆಲ್ಲ ಯೋಗ್ಯತೆಗಳಿದ್ದೂ ದೇವುಡು ಸರ್ಕಾರಿ ಅಥವಾ ಖಾಸಗಿ ನೌಕರಿಗೆ ಸೇರಿಕೊಳ್ಳಲಿಲ್ಲ. ಹಂಗಿನ ಬದುಕನ್ನು ಒಪ್ಪದ ಸ್ವತಂತ್ರ ಪ್ರವೃತ್ತಿ ಅವರದು. ತಾನಾಗಿ ಬಂದ ಅವಕಾಶಗಳನ್ನು ಈ ಕಾರಣಕ್ಕಾಗಿಯೇ ಬಿಟ್ಟುಕೊಟ್ಟು, ಸ್ವತಂತ್ರವಾಗಿ ದುಡಿಮೆಗೆ ತೊಡಗಿದರು. ಅಕ್ಷರ ಪ್ರಚಾರ, ವಯಸ್ಕರ ಶಿಕ್ಷಣ, ಅಧ್ಯಾಪನ, ಪತ್ರಿಕೋದ್ಯಮ, ನಾಟಕ ರಚನೆ, ನಟನೆ, ಚಲನಚಿತ್ರ ನಿರ್ಮಾಣ ಮತ್ತು ನಟನೆ, ವಿವಿಧ ಪ್ರಕಾರಗಳಲ್ಲಿ ಸಾಹಿತ್ಯ ರಚನೆ, ಚಿತ್ರಕಲೆ, ಸಂಗೀತ, ರಾಜಕಾರಣ ಹೀಗೆ ತಮ್ಮ ಪ್ರವೃತ್ತಿಗಳಿಗನುಗುಣವಾಗಿ ವೃತ್ತಿಗಳನ್ನು ಬದಲಾಯಿಸುತ್ತ ಹೋದರು. ಬದುಕಿನಲ್ಲಿ ಈ ಬಗೆಯ ಪ್ರಯೋಗಶೀಲತೆಗೆ, ಸಾಹಸಕ್ಕೆ ಹೆಸರಾದ ಡಾ. ಶಿವರಾಮ ಕಾರಂತರಂತೆ. ಆದರೆ ಅವರಿಗಿಂತ ಮೊದಲೇ ದೇವುಡು ಇಂಥ ದುರ್ಗಮ ದಾರಿಯಲ್ಲಿ ಸಾಗಿದ್ದರು. ಮನುಷ್ಯ ತನ್ನ ಸರ್ವಶಕ್ತಿಗಳನ್ನೂ ಒರೆಗೆ ಹಚ್ಚಿ ಬೆಳೆಸಬೇಕು ಎಂಬ ಗುರಿಗೆ ಮಾದರಿಯಾಗಿತ್ತು ಅವರ ಜೀವನ. ಕಾರಂತ ಮತ್ತು ದೇವುಡು ಅವರಿಬ್ಬರ ಕಾರ್ಯಕ್ಷೇತ್ರಗಳೂ ಬಹುತೇಕ ಒಂದೇ ಆಗಿವೆ ಎಂಬುದು ಕುತೂಹಲಕಾರಿ ಸಂಗತಿಯಾಗಿದೆ. ಇಬ್ಬರದೂ ದೈತ್ಯ ಪ್ರತಿಭೆಯೇ. ಇದ್ದ ಮುಖ್ಯ ವ್ಯತ್ಯಾಸ ಅವರ ನಂಬಿಕೆಗಳಿಗೆ ಸಂಬಂಧಿಸಿದ್ದು. ದೇವುಡು ಸಂಪ್ರದಾಯ ಶ್ರದ್ಧೆಯುಳ್ಳ ವೈದಿಕ ಧರ್ಮಾನುಯಾಯಿ ಮತ್ತು ಅದರ ಪುನರುದ್ಧಾರಕ್ಕೆ ಪ್ರಯತ್ನಿಸಿದವರು. ಪ್ರಾಚೀನ ಜೀವನ ಕ್ರಮದ ಪ್ರಬಲವಾದ ಪ್ರತಿಪಾದಕರು. ಇದಕ್ಕೆ ವಿರುದ್ಧವಾಗಿ ಕಾರಂತರು ಶುದ್ಧ ವಿಚಾರವಾದಿಗಳು. ಧರ್ಮ, ದೇವರ ಕುರಿತ ಅಶ್ರದ್ಧೆಯುಳ್ಳ ವೈಜ್ಞಾನಿಕ ದೃಷ್ಟಿಯಿಂದ ಸಮಾಜದ ಪ್ರಗತಿಯನ್ನು ಬಯಸಿದವರು.

ದೇವುಡು ನಿಷ್ಠುರ ಸಂಪ್ರದಾಯವಾದಿ. ಪ್ರಾಚೀನ ಸಂಸ್ಕೃತಿಯನ್ನು ಕುರಿತ ಅವರ ಶ್ರದ್ಧೆ ಯಾವ ಮಟ್ಟದ್ದೆಂದರೆ ಆಧ್ಯಾತ್ಮಿಕ ಆಚರಣೆಗಳನ್ನು ಆಮೂಲಾಗ್ರ ಅಧ್ಯಯನ ಮಾಡಿದರಷ್ಟೇ ಅಲ್ಲ ತನ್ಮಯತೆಯಿಂದ ಸಾಧನೆಗಳನ್ನು ಮಾಡಿ ಸಿದ್ಧಿಗಳನ್ನು ಪಡೆದಿದ್ದರೆನಿಸುತ್ತದೆ. ದಿವ್ಯ ಚೈತನ್ಯದ ಬಗೆಗೆ ಕೇವಲ ನಂಬಿದ್ದರಷ್ಟೇ ಅಲ್ಲ ಪವಾಡ ಸದೃಶ್ಯ ಶಕ್ತಿಗಳನ್ನು ಅವರೇ ಹೊಂದಿದ್ದರು. ಅವರ ಮಿತ್ರರಲ್ಲಿ ಒಬ್ಬರಾದ ಬೆಳಗೆರೆ ಕೃಷ್ಣಶಾಸ್ತ್ರಿಗಳು ತಮ್ಮ ಒಂದು ಲೇಖನದಲ್ಲಿ[1] ದೇವುಡು ರೋಗಿಯ ಶರೀರವನ್ನು ಮುಟ್ಟುವ ಮೂಲಕ ರೋಗ ನಿವಾರಣೆ ಮಾಡಿದ್ದನ್ನೂ, ತಮ್ಮ ಅಂಗೈಲಿದ್ದ ಗುಂಡುಕಲ್ಲು ಚಟುವಟಿಕೆಯನ್ನು ಪಡೆದಿದ್ದನ್ನು ಪ್ರತ್ಯಕ್ಷದರ್ಶಿಗಳಾಗಿ, ಸ್ವಾನುಭವಿಗಳಾಗಿ ವರ್ಣಿಸಿದ್ದಾರೆ.[2] ಮನುಷ್ಯ ದೇಹದಲ್ಲಿ ವಿಶೇಷ ಸಂವಹನ ಶಕ್ತಿ ಇದೆ ಎಂದೂ ಚೇತನಾ ಚೇತನಗಳು ಬೇರಲ್ಲವೆಂದೂ ದೇವುಡು ಸಾಧಿಸಿ ತೋರಬಲ್ಲವರಾಗಿದ್ದಿರಬೇಕು. ಸನಾತನಿಗಳಾಗಿದ್ದರೂ ದೇವುಡು ಮಡಿವಂತರಾಗಿರಲಿಲ್ಲ. ಅನ್ಯಧರ್ಮಗಳನ್ನೂ ಧರ್ಮೀಯರನ್ನೂ ಗೌರವಿಸುತ್ತಿದ್ದರೆಂಬುದಕ್ಕೆ ಉತ್ತಂಗಿ ಚೆನ್ನಪ್ಪನವರ ಭೇಟಿ ಪ್ರಸಂಗ, ದಂತಕತೆಯಂತೆ ಸಾಕ್ಷಿಯಾಗಿ ನಿಂತಿದೆ. ಅವರ ಚಿಂತನೆಯ ಬೇರುಗಳು ಸನಾತನ ಧರ್ಮದಲ್ಲಿದ್ದರೂ ಸಮಾಜದ ಅನಿಷ್ಟ ಪದ್ಧತಿಗಳಿಗೆ ಸಂಬಂಧಿಸಿದಂತೆ ಅವರ ದೃಷ್ಟಿ ಪ್ರಗತಿಪರವಾಗಿತ್ತು.

ದೃಢಕಾಯರೂ ಸುಂದರವದನರೂ ಆದ ದೇವುಡು ಅವರದು ಹಾಸ್ಯ ಪ್ರವೃತ್ತಿ. ಹೊಟ್ಟೆಬಾಕತನವೂ ಸೇರಿದಂತೆ ಅವರ ವರ್ಣಮಯ ವ್ಯಕ್ತಿತ್ವ ಅತ್ಯಂತ ಆಕರ್ಷಕವಾದದ್ದು. ಬಡತನ, ಪ್ರಾಮಾಣಿಕತೆ, ಸ್ವಾಭಿಮಾನಗಳಿಂದಾಗಿ ಬದುಕಿಗೆ ಬಹಳಷ್ಟು ಕಷ್ಟನಿಷ್ಠುರಗಳನ್ನು ಆಹ್ವಾನಿಸಿಕೊಂಡು ಅವುಗಳನ್ನು ಛಲದಿಂದ ಎದುರಿಸಿ ಗೆದ್ದ ಸಾಹಸಿ. ಮಧುಮೇಹದಿಂದಾಗಿ (ಕತ್ತರಿಸಲ್ಪಟ್ಟ) ಕಾಲಿಲ್ಲದ ಸ್ಥಿತಿಯಲ್ಲೇ ಮಹಾದರ್ಶನದಂಥ ಕಾದಂಬರಿಯನ್ನು ರಚಿಸಿದರೆಂಬುದು ಅವರ ಹೋರಾಟ ಪ್ರವೃತ್ತಿಗೆ ನಿದರ್ಶನವಾಗಿದೆ. ಅಂತೆಯೇ ಕರ್ಮತಃ ಬ್ರಾಹ್ಮಣನಾಗಿದ್ದು. ಆಧ್ಯಾತ್ಮಿಕ ಲೋಕದಲ್ಲಿ ಸಂಚರಿಸುತ್ತಲೇ ಅತ್ಯಾಧುನಿಕ ಭ್ರಮಾಲೋಕದಲ್ಲೂ-ಚಲನಚಿತ್ರ ನಟನೆ ನಿರ್ಮಾಣ-ವಿಹರಿಸಿದ್ದು ಅವರ ಅಭಿರುಚಿಯ ವೈವಿಧ್ಯ ಮತ್ತು ವೈಚಿತ್ರ್ಯಗಳಿಗೆ ಹಿಡಿದ ಕನ್ನಡಿಯಾಗಿದೆ.

ಸಮಾಜಸೇವೆ, ವೇದಾಂತ ಮತ್ತಿತರ ಕ್ಷೇತ್ರಗಳಿಗೆ ಅವರಿಂದ ಸಂದಿರುವ ಕಾಣಿಕೆ ಚಿಕ್ಕದಲ್ಲವಾದರೂ ದೇವುಡು ಸಾಹಿತಿಯಾಗಿಯೇ ಹೆಸರು ಗಳಿಸಿದವರು. ನವೋದಯ ಕಾಲದ ಇತರ ಹಿರಿಯ ಸಾಹಿತಿಗಳಂತೆ ಬೇರೆ ಬೇರೆ ಪ್ರಕಾರಗಳಲ್ಲಿ ಸಾಹಿತ್ಯ ರಚನೆ ಮಾಡಿದ್ದಾರೆ. ಮೂರು ಪ್ರಸಿದ್ಧ ಪೌರಾಣಿಕ ಕಾದಂಬರಿಗಳಲ್ಲದೆ ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ ಮುಂತಾದ ವಿವಿಧ ಗುಂಪಿಗೆ ಸೇರಿದ ೧೨ ಕಾದಂಬರಿಗಳನ್ನು ನಾಲ್ಕು ಕಥಾ ಸಂಕಲನಗಳನ್ನೂ ನಾಲ್ಕು ನಾಟಕಗಳನ್ನೂ ಸೃಷ್ಟಿಸಿದ್ದಾರೆ. ಕರ್ನಾಟಕ ಸಂಸ್ಕೃತಿ ಎಂಬ ಅತ್ಯಮೂಲ್ಯವಾದ ಕೃತಿಯೊಂದನ್ನು ಜಾನಪದ ಕ್ಷೇತ್ರಕ್ಕೆ ನೀಡಿದ್ದಾರೆ. ಸಂಸ್ಕೃತ ಸಾಹಿತ್ಯವನ್ನು ಕುರಿತಂತೆ, ಆಧ್ಯಾತ್ಮಿಕ ವಿಚಾರಗಳನ್ನು ಕುರಿತಂತೆ ವಿಮರ್ಶೆಗಳನ್ನು ಬರೆದಿದ್ದಾರೆ. ಹಲವಾರು ಸಂಗ್ರಹ ಗ್ರಂಥಗಳೂ ಅನುವಾದ ಗ್ರಂಥಗಳೂ ಅವರ ಸಾಹಿತ್ಯ ರಾಶಿಯಲ್ಲಿವೆ. ಪತ್ರಿಕೆಗಳ ಸಂಪಾದನೆಯ ಅನುಭವ ಎಂದೂ ಅವರಿಗಿದೆ. ಎಲ್ಲಕ್ಕಿಂತ ಮಕ್ಕಳ ಸಾಹಿತ್ಯಕ್ಕೆ ದೇವುಡು ಅವರ ಕಾಣಿಕೆ ಹಿರಿದಾಗಿದೆ. ಸುಮಾರು ೧೪ ಕಥಾ ಸಂಕಲನಗಳನ್ನು ಮಕ್ಕಳಿಗೆ ಅವರು ನೀಡಿದ್ದಾರೆ. ಒಟ್ಟಾರೆ ಗಾತ್ರದಲ್ಲಿಯೂ ದೇವುಡು ಸಾಹಿತ್ಯ ದೊಡ್ಡದು.

ಎಲ್ಲೆಲ್ಲೂ ದೊಡ್ಡದನ್ನೇ ಸಾಧಿಸುವ ಗುರಿ ಹೊಂದಿದ್ದ ಕನ್ನಡದ ಈ ದೊಡ್ಡಣ್ಣ ಸಾಹಿತ್ಯ ಕ್ಷೇತ್ರದಲ್ಲಿ ಸಾಧಿಸಿದ್ದು ಸಣ್ಣದಲ್ಲ. ಪ್ರಶಸ್ತಿ, ಗೌರವಗಳು ಜೀವಂತವಾಗಿದ್ದಾಗ ಅವರಿಗೆ ಹೆಚ್ಚಾಗಿ ದೊರೆಯಲಿಲ್ಲ. ಅವರ ಮರಣಾನಂತರ (೧೯೬೨) ಮಹಾಕ್ಷತ್ರಿಯ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿತು. ಸಾಹಿತ್ಯ ಪರಿಷತ್ತಿನಲ್ಲಿ ದುಡಿದಿದ್ದರಾದರೂ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಮುಂತಾದ್ದು ಅವರನ್ನು ಅರಸಿ ಬರಲಿಲ್ಲ. ಆದಾಗ್ಯೂ ಈಚಿನ ದಿನಗಳಲ್ಲಿ ವಿಶೇಷವಾಗಿ ಶತಮಾನೋತ್ಸವದ ನಂತರ, ಅವರನ್ನು ಕುರಿತು ಸಾಹಿತ್ಯ ಸಂಸ್ಕೃತಿಯ ಅಭಿಮಾನಿಗಳು ಕಾಳಜಿ ತೋರುತ್ತಿದ್ದಾರೆ. ಅವರ ಸಾಹಿತ್ಯದ ಗಂಭೀರ ಅಧ್ಯಯನಗಳನ್ನು ಕೈಗೊಳ್ಳುತ್ತಿದ್ದಾರೆ. ಕೃತಿಗಳು ಮರು ವಿಮರ್ಶೆಗೊಳಪಡುತ್ತಿವೆ ಎಂಬುದು ಸಮಾಧಾನದ ಸಂಗತಿಯಾಗಿದೆ.

**ತ.ರಾ.ಸು.**

ತಳುಕಿನ ರಾಮಸ್ವಾಮಯ್ಯ ಸುಬ್ಬರಾಯ ಆಧುನಿಕ ಕನ್ನಡ ಸಾಹಿತ್ಯದ ದೊಡ್ಡ ಹೆಸರುಗಳಲ್ಲೊಂದು. ಚಿತ್ರದುರ್ಗ ಜಿಲ್ಲೆಯಲ್ಲಿ ಹುಟ್ಟಿ (೧೯೨೦) ಬೆಳೆದು ಬೆಂಗಳೂರು ಮೈಸೂರುಗಳಲ್ಲಿ ನೆಲೆಸಿದ್ದ ತ.ರಾ.ಸುಬ್ಬರಾಯರು ಕನ್ನಡದ ಅತ್ಯಂತ ಜನಪ್ರಿಯ ಮತ್ತು ಸುಪ್ರಸಿದ್ಧ ಕಾದಂಬರಿಕಾರರು. ಸಂಪ್ರದಾಯ ನಿಷ್ಠ ಮನೆತನದಲ್ಲಿ ಹುಟ್ಟಿಯೂ ಚಿಕ್ಕಂದಿನಿಂದಲೂ ಬಂಡಾಯ ಪ್ರವೃತ್ತಿಯನ್ನು ಹೊಂದಿದ್ದವರು. ಅವರಲ್ಲಿದ್ದ ಈ ಸಿಡಿದೇಳುವ ಸ್ವಭಾವ ಅವರನ್ನೊಬ್ಬ ಪ್ರಗತಿಶೀಲ ಸಾಹಿತಿಯನ್ನಾಗಿಸಿತು. ತರಗತಿಯ ಓದಿನಲ್ಲಿ ಹೆಚ್ಚು ಆಸಕ್ತಿ ತೋರದ, ಮನೆಬಿಟ್ಟು ಹೊರಗೇ ಸ್ನೇಹಿತರು, ನಾಟಕ, ಸಿನಿಮಾ ಎಂದು ಅಡ್ಡಾಡುವ ಈ ಹುಡುಗನ ಉಡಾಳ ಗುಣ ತಂದೆಯಾದಿಯಾಗಿ ಮನೆಯವರ್ ಯಾರಿಗೂ ಇಷ್ಟವಾಗುತ್ತಿರಲಿಲ್ಲ. ತಾಯಿಯ ಪ್ರೀತಿ ದೊರೆಯುವಂತಿರಲಿಲ್ಲವಾಗಿ ಬಾಲ್ಯದ ಅಗತ್ಯವಾದ ವಾತ್ಸಲ್ಯದಿಂದ ತ.ರಾ.ಸು. ವಂಚಿತರಾಗಿದ್ದರು. ಆದರೂ ಅವರ ಮನೆತನದ ಪರಿಸರ ಮಾತ್ರ ಸಾಹಿತಿಯಾಗಿ ಬೆಳೆಯುವುದಕ್ಕೆ ಹೇಳಿ ಮಾಡಿದಂತಿತ್ತು. ಅವರ ತಾತ ದೊಡ್ಡ ಸುಬ್ಬಣ್ಣನವರು ಆಶುಕವಿಗಳು. ಬಯಲು ನಾಟಕಗಳನ್ನು ಬರೆದವರು. ದೊಡ್ಡಪ್ಪ ಟಿ.ಎಸ್. ವೆಂಕಣ್ಣಯ್ಯನವರು ಕನ್ನಡ ನವೋದಯ ಕಾಲದ ಶ್ರೇಷ್ಠಸಾಹಿತಿಗಳಲ್ಲೊಬ್ಬರು. ಕನ್ನಡವನ್ನು ಕಟ್ಟಿದ ಕೀರ್ತಿಗೆ ಬಾಜನರಾದವರು. ಚಿಕ್ಕಪ್ಪ ತ.ಸು.ಶಾಮರಾಯರು ಸ್ವತಃ ಸಾಹಿತಿಗಳಾಗಿದ್ದಿದ್ದಲ್ಲದೆ ಶಿಷ್ಯ ವತ್ಸಲರಾಗಿದ್ದು ಹಲವಾರು ಸಾಹಿತಿಗಳನ್ನು ಸಾಕಿ ಬೆಳೆಸಿದ ಗುರುಗಳು. ಅವರ ತಂದೆ, ಮಾವಂದಿರೂ

ಸಾಹಿತ್ಯ ಕ್ಷೇತ್ರದಲ್ಲಿ ಕೈಯಾಡಿಸಿದವರೇ. “ಕನ್ನಡದ ಯಾವ ಬರಹಗಾರನಿಗೂ ಇಷ್ಟೊಂದು ಪ್ರಬುದ್ಧ ಸಾಹಿತಿಗಳ ಶ್ರೀಮಂತ ಸಂಪರ್ಕ ದೊರೆತಿರುವುದು ಕನ್ನಡ ಸಾಹಿತ್ಯೇತಿಹಾಸದಲ್ಲಿ ಕಾಣದೊರೆಯದು”[3] ಎಂಬ ಮಾತು ಸತ್ಯವಾಗಿದೆ. ಮನೆಯ ಹೊರಗೂ ಇಂಥದೇ ಪರಿಸರ ಅವರಿಗೆ ದೊರೆತದ್ದು ವಿಶೇಷ. ಚಿಕ್ಕಂದಿನಿಂದ ಸಿದ್ದವ್ವನಹಳ್ಳಿ ನಿಜಲಿಂಗಪ್ಪ, ಕೃಷ್ಣಶರ್ಮ, ಹುಲ್ಲೂರು ಶ್ರೀನಿವಾಸ ಜೋಯಿಸರಂಥವರ ಮಾರ್ಗದರ್ಶನ, ನಂತರ ಅ.ನ.ಕೃ. ಅಂಥ ಸಾಹಿತಿಗಳ ಸ್ನೇಹ, ನಾಯಕತ್ವ, ಹಲವು ಮಂದಿ ಅಧ್ಯಾಪಕರು ಪತ್ರಿಕೋದ್ಯಮಿಗಳ ಮಿತ್ರತ್ವ ಎಲ್ಲ ತ.ರಾ.ಸು.ಗೆ ದೊರೆತವು. ಈ ಎಲ್ಲ ಪ್ರಭಾವಿ ಶಕ್ತಿಗಳು ಅವರನ್ನು ಒಬ್ಬ ಸ್ವಾತಂತ್ರ್ಯ ಹೋರಾಟಗಾರನನ್ನಾಗಿ, ಪತ್ರಿಕೋದ್ಯಮಿಯನ್ನಾಗಿ ಎಲ್ಲಕ್ಕಿಂತ ಹೆಚ್ಚಾಗಿ ಶ್ರದ್ಧೆಯಿಂದ ಓದಿ ಬರೆಯುವ ಸಾಹಿತಿಯನ್ನಾಗಿ ರೂಪಿಸಿದವು.

ಬರಹದಿಂದಲೇ ಬದುಕಿದ್ದ (ಮರಣ ೧೯೮೪) ಬೆರಳೆಣಿಕೆಯಷ್ಟು ಮಂದಿ ಕನ್ನಡ ಸಾಹಿತಿಗಳಲ್ಲಿ ತ.ರಾ.ಸು. ಒಬ್ಬರು. ಆರ್ಥಿಕವಾಗಿ ಬಹುವಾಗಿ ಏಳುಬೀಳು ಕಂಡ ಅವರ ಬದುಕು ಅತ್ಯಂತ ವರ್ಣಮಯವೂ ಆಗಿತ್ತು. ತೀವ್ರವಾಗಿ ಬೆಳೆಯುತ್ತಿದ್ದ ಆಧುನಿಕ ಸಾಹಿತ್ಯಕ್ಕೆ ತ.ರಾ.ಸು. ಕಾಣಿಕೆ ಬಹಳ ದೊಡ್ಡದು. ಗದ್ಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಷ್ಟೇ ಅಲ್ಲದ ಅ.ನ.ಕೃ. ಅವರೊಂದಿಗೆ ಕನ್ನಡ ಓದುಗರ ಬಳಗವನ್ನೂ ಅವರು ಬೆಳೆಸಿದರೆಂಬುದನ್ನು  ಮರೆಯುವಂತಿಲ್ಲ. ಹಾಗೆಂದು ಬದುಕಿಗಾಗಿ, ಭಾಷೆಗಾಗಿ ಬೇಕಾಬಿಟ್ಟಿ ಬರೆದವರಲ್ಲ. ಗಂಭೀರ ಓದಿಗೆ ಗ್ರಾಸವಾದ ಎಲ್ಲ ಗಹನತೆಗಳು ಅವರ ಕೃತಿಗಳಲ್ಲಿವೆ. ಇಂಗ್ಲಿಷ್ ಸಾಹಿತ್ಯದ ಮತ್ತು ದೇಶೀಯ ಇತಿಹಾಸದ ಶ್ರಮಪೂರ್ಣ, ಶ್ರದ್ಧಾಪೂರ್ಣ ಅಧ್ಯಯನವನ್ನು ಅವರು ಮಾಡಿದ್ದರು. ಅವರಿಗಿದ್ದ ಶ್ರೇಷ್ಠವಾಗ್ಮಿತೆಯೂ ಅವರ ಪ್ರತಿಭೆಯ ಇನ್ನೊಂದು ಮುಖವಾಗಿದ್ದು ಖ್ಯಾತಿ ತಂದುಕೊಟ್ಟಿತು.

ಪ್ರಗತಿಶೀಲ ಚಳವಳಿಯೊಂದಿಗೇ ಗುರುತಿಸಿಕೊಂಡು ಅದರ ಬಹು ಮುಖ್ಯ ಲೇಖಕರಲ್ಲಿ ಒಬ್ಬರಾದ ತ.ರಾ.ಸು. ಸುಮಾರು ನೂರು ಕೃತಿಗಳನ್ನು ರಚಿಸಿದ್ದಾರೆ-ನೂರಕ್ಕೆ ಮೂರು ಮಾತ್ರ ಕಡಿಮೆ. ಅವುಗಳಲ್ಲಿ ಸುಮಾರು ೭೦ ಕಾದಂಬರಿಗಳೇ ಆಗಿವೆ. ಕಾದಂಬರಿಯಲ್ಲದೆ ಸಣ್ಣಕತೆ ಮತ್ತು ನಾಟಕ ಪ್ರಕಾರಗಳಲ್ಲೂ ಅವರು ಸೃಜನಶೀಲ ಕೃತಿಗಳನ್ನು ರಚಿಸಿದ್ದಾರೆ. ಇವಲ್ಲದೆ ಭಾಷಾಂತರಗಳು, ಜೀವನಚರಿತ್ರೆಗಳು, ಸಂಪಾದನೆಗಳು ಅವರ ಕೃತಿ ರಾಶಿಯಲ್ಲಿವೆ. ಆದಾಗ್ಯೂ ತ.ರಾ.ಸು. ನಮ್ಮ ಮೊದಲ ಸಾಲಿನ ಕಾದಂಬರಿಕಾರರಾಗಿಯೇ ಗೌರವಿಸಲ್ಪಡುತ್ತಿದ್ದಾರೆ.

ಬಹುಸಂಖ್ಯೆಯಲ್ಲಿ ಅವರು ರಚಿಸಿರುವ ಕಾದಂಬರಿಗಳಲ್ಲಿ ಐತಿಹಾಸಿಕ ಮತ್ತು ಸಾಮಾಜಿಕ ಕಾದಂಬರಿಗಳು ಮುಖ್ಯವಾಗಿವೆ. ಸಾಮಾಜಿಕ ಕಾದಂಬರಿಗಳು ಸಾಂಪ್ರದಾಯಿಕತೆಯನ್ನು ವಿರೋಧಿಸುತ್ತಾ ಹೊಸ ಸಮಾಜ ನಿರ್ಮಾಣದ ಹಂಬಲ ಹೊತ್ತಿದ್ದರೆ, ಐತಿಹಾಸಿಕ ಕೃತಿಗಳು ಪೂರ್ವಿಕರ ಜೀವನವನ್ನು ಅವರ ಶೌರ್ಯ ಸಾಹಸಗಳನ್ನು, ಅಂದಿನ ಸಮಾಜವನ್ನು ಸಹಜವಾಗಿ ಕಟ್ಟಿಕೊಡುವ ಉದ್ದೇಶವನ್ನು ಹೊಂದಿವೆ. ತಮ್ಮ ಹುಟ್ಟೂರು ಚಿತ್ರದುರ್ಗದ ಇಡಿಯ ಇತಿಹಾಸಕ್ಕೆ ಜೀವ ನೀಡಿರುವ ಅವರ ಐತಿಹಾಸಿಕ ಕಾದಂಬರಿ ಸರಣಿ ನಮ್ಮ ಸಾಹಿತ್ಯ ಇತಿಹಾಸಗಳಿಗೆ ನೀಡಿರುವ ಬೆಲೆಯುಳ್ಳ ಕೊಡುಗೆಯಾಗಿದೆ. ಈಚಿನ ಬೃಹತ್ಕೃತಿ ದುರ್ಗಾಸ್ತಮಾನ ಇವುಗಳಿಗೆಲ್ಲ ಕಿರೀಟ ಪ್ರಾಯವಾಗಿದೆ. ಅವರ ಹಲವಾರು ಕಾದಂಬರಿಗಳು ಚಲನಚಿತ್ರಗಳಾಗಿ ಅತ್ಯಂತ ಯಶಸ್ವಿಯಾಗಿವೆ.

ಪೌರಾಣಿಕ ಕಾದಂಬರಿ ಪ್ರಕಾರದಲ್ಲಿ ಅವರು **ಬೆಳಕು ತಂದ ಬಾಲಕ** ಮತ್ತು **ನಾಲ್ಕು x ನಾಲ್ಕು = ಒಂದು** ಎಂಬ ಎರಡು ಕೃತಿಗಳನ್ನು ರಚಿಸಿ ಕಾದಂಬರಿ ರಚನೆಯಲ್ಲಿ ವಸ್ತು ವೈವಿಧ್ಯವನ್ನು ಮೆರೆದಿದ್ದಾರೆ.

ಕನ್ನಡ ಸಾಹಿತ್ಯ ಪ್ರೇಮಿಗಳು ತ.ರಾ.ಸು. ಅವರಿಗೆ ಹಲವು ಬಗೆಯಲ್ಲಿ ತಮ್ಮ ಕೃತಜ್ಞತೆಗಳನ್ನು ಸೂಚಿಸಿದ್ದಾರೆ. ಚಿತ್ರದುರ್ಗ, ಪಾಂಡವಪುರ, ಹುಬ್ಬಳ್ಳಿ ಮುಂತಾದ ಕಡೆಗಳಲ್ಲಿ ವಿವಿಧ ಸಂದರ್ಭಗಳಲ್ಲಿ ಅವರನ್ನು ಅಭೂತ ಪೂರ್ವವಾಗಿ ಸನ್ಮಾನಿಸಲಾಗಿದೆ. ಅಭಿನಂದನಾ ಗ್ರಂಥ ಅರ್ಪಿಸಲಾಗಿದೆ. ಅವರ ಕೃತಿಗಳಿಗೆ ಕನ್ನಡ ಸಾಹಿತ್ಯ ಪರಿಷತ್ತು, ರಾಜ್ಯ ಸಾಹಿತ್ಯ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿಗಳ ಪುರಸ್ಕಾರಗಳು ದೊರೆತಿವೆ. ೧೯೬೯ರಲ್ಲಿ ಪಶ್ಚಿಮ ಜರ್ಮನಿ ಮತ್ತು ಸೋವಿಯತ್ ರಷ್ಯಾ ದೇಶಗಳ ಪ್ರವಾಸವನ್ನೂ ಅವರು ಕೈಗೊಂಡಿದ್ದರು. ಹಿಂದಿ ಮತ್ತಿತರ ಭಾಷೆಗಳಲ್ಲಿ ಅವರ ಕಾದಂಬರಿಗಳು ಚಲನಚಿತ್ರಗಳಾಗುವ ರಾಷ್ಟ್ರಮಟ್ಟದ ಖ್ಯಾತಿಯನ್ನು ಅವರಿಗೆ ತಂದು

ಕೊಟ್ಟವು-ಹಂಸಗೀತೆ (ಹಿಂದಿ) ನಾಗರಹಾವು (ಹಿಂದಿ, ತಮಿಳು, ತೆಲಗು). ಆದರೂ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಯ ಪಟ್ಟದಂಥ ಗೌರವ ಅವರಿಗೆ ಸಲ್ಲಲ್ಲಿಲ್ಲವೆಂಬುದು ಕನ್ನಡಿಗರಿಂದಾದ ಕರ್ತವ್ಯ ಚ್ಯುತಿಯೆಂದೇ ತಿಳಿಯಬಹುದು.

**ಅನುಪಮ ನಿರಂಜನ**

ಕನ್ನಡದ ಲೇಖಕಿಯರಲ್ಲಿ ಶ್ರೇಷ್ಠರೂ ಅತಿ ಜನಪ್ರಿಯರೂ ಆಗಿದ್ದರು. ಇಂದಿಗೂ ಆ ಸ್ಥಾನದಲ್ಲೇ ಇರುವವರು ಅನುಪಮಾ ನಿರಂಜನರು ಎಂಬ ಮಾತಿಗೆ ಎರಡಿಲ್ಲವೆನಿಸುತ್ತದೆ ಸಾಹಿತ್ಯಿಕ ಗುಣದಲ್ಲಾಗಲಿ ಕೃತಿಗಳ ಸಂಖ್ಯೆಯಲ್ಲಾಗಲಿ ಅವರನ್ನು ಮೀರುವ ಲೇಖಕಿ ಇನ್ನೂ ಬಂದಿಲ್ಲವೆಂದೇ ಹೇಳಬಹುದು. ಬಹುಶಃ ಬದುಕಿನಲ್ಲಿ 'ಸಿಹಿ ಕಹಿ'ಗಳನ್ನು ಅವರಂತೆ ದಟ್ಟವಾಗಿ ಅನುಭವಿಸಿರುವ ಮತ್ತೊಬ್ಬ ಲೇಖಕಿ (ಮಹಿಳೆಯರಿದ್ದಾರು) ಇಲ್ಲವೆಂಬುದೂ ಉತ್ಪ್ರೇಕ್ಷೆಯಾಗಲಾರದು.

೧೯೩೪ರಲ್ಲಿ ಶಿವರಾಮಯ್ಯ ಮತ್ತು ಲಕ್ಷ್ಮಿ ದಂಪತಿಗೆ ಮೊದಲ ಮಗಳಾಗಿ ತೀರ್ಥಹಳ್ಳಿಯಲ್ಲಿ ಜನ್ಮ ತಳೆದ ಅನುಪಮಾ ಕುಟುಂಬದವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರು. ವೈದ್ಯಕೀಯ ಶಿಕ್ಷಣ ಪಡೆದ ಅನುಪಮಾ (ನಿಜನಾಮಧೇಯ-ವೆಂಕಟಲಕ್ಷ್ಮಿ) ವೃತ್ತಿಯಿಂದ ವೈದ್ಯರಾಗಿ ಜನರ ಅನುರಾಗ ಗಳಿಸಿದರು. ಆಗಲೇ ಪ್ರಸಿದ್ಧ ಸಾಹಿತಿಯಾಗಿದ್ದ ನಿರಂಜನ ಅವರನ್ನು ಪ್ರೀತಿಸಿ ಮದುವೆಯಾದರು. ೧೯೫೦ರಷ್ಟು ಹಿಂದೆಯೇ ನಡೆದ ಈ ವಿವಾಹ, ಪ್ರೇಮ ವಿವಾಹ ಅಂತರ್ ಜಾತೀಯ ವಿವಾಹ ಎಂಬ ಕ್ರಾಂತಿಯ ಕಿಡಿಗಳನ್ನು ಹೊಂದಿತ್ತು. ಚಿಕ್ಕಂದಿನಲ್ಲೇ ಸಂಪ್ರದಾಯಸ್ಥ ಸಮಾಜವನ್ನು ಎದುರಿಸಿದ ಈ 'ವೀರ ವನಿತೆ' ಮುಂದೆ ತಮ್ಮ ಸಂಸಾರದ ಕೋಟಲೆಗಳನ್ನು ಎದುರಿಸಬೇಕಾಯಿತು. ಅವರ ದಾಂಪತ್ಯದ ಬಹುಭಾಗ ಪತಿಯ ಮತ್ತು ತಮ್ಮ ಮಾರಕ ವ್ಯಾಧಿಗಳೊಂದಿಗಿನ ಸೆಣಸಾಟದ, ಬಳಲಿಕೆಯ ಪರ್ವವಾಯಿತು. ಈ ನೋವಿನ ನಂಜನ್ನೆಲ್ಲ ನುಂಗಿ ನುಡಿಯ ಅಮೃತ ಸೇಚನೆಯನ್ನು ಅನುಪಮಾ ಮಾಡುತ್ತಲೇ ಬಂದರು. ನಿಜವಾದ ಅರ್ಥದಲ್ಲಿ ಅವರದೊಂದು ಮಾದರಿಯ ಬದುಕಾಯಿತು.

೧೯೯೧ರಲ್ಲಿ ತೀರಿಕೊಂಡ ಅನುಪಮಾ ನಿರಂಜನ ಅವರು ಅಷ್ಟರಲ್ಲೇ ೭೦ ಕ್ಕೂ ಹೆಚ್ಚು ಮೌಲಿಕ ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದರು. ಹದಿಮೂರರ ಎಳೆ ಹರೆಯದಿಂದಲೇ ತೊಡಗಿದ ಅವರ ಬರವಣಿಗೆ 'ಧಾರಾವಾಹಿ'ಯಾಗಿ ಸಾಗಿತು. ಒಬ್ಬ ಜವಾಬ್ದಾರಿಯುತ ವೈದ್ಯೆಯಾಗಿ ಅನುಪಮಾ ಅತ್ಯುಪಯುಕ್ತ ವೈದ್ಯಕೀಯ ಸಾಹಿತ್ಯ ರಚಿಸಿದ್ದಾರೆ. 'ವಧುವಿಗೆ ಕಿವಿಮಾತು', 'ದಾಂಪತ್ಯ ದೀಪಿಕೆ', 'ತಾಯಿ ಮಗು', ೧೦ ಕ್ಕಿಂತ ಹೆಚ್ಚು ಬಾರಿ ಮುದ್ರಣಗೊಂಡಿರುವ ಅತ್ಯಂತ ಜನಪ್ರಿಯ ವೈದ್ಯಕೀಯ ಬರಹಗಳು. ಅಂತೆಯೇ ದಿನಕ್ಕೊಂದು ಕಥೆ ಎಂಬ ಸಾಹಿತ್ಯ ಮಾಲಿಕೆಯ ಮೂಲಕ ಶಿಶು ಸಾಹಿತ್ಯ ರಚನೆಯಲ್ಲಿಯೂ ದಾಖಲೆ ನಿರ್ಮಿಸಿದ್ದಾರೆ. ಮಹಿಳೆಯಾಗಿ ಈ ಎರಡೂ ಕ್ಷೇತ್ರಗಳಲ್ಲಿ ಅವರಂತೆ ಕೀರ್ತಿ ಗಳಿಸಿದವರು ಮತ್ತಿಲ್ಲ. ಶುದ್ಧ ಸಾಹಿತ್ಯ ಕೃತಿಗಳಾಗಿ ಅವರ ಅನೇಕ ಕಾದಂಬರಿಗಳು ಕಥೆಗಳು ಪ್ರಸಿದ್ಧವಾಗಿವೆ. ಕಾದಂಬರಿಕಾರ್ತಿಯಾಗಿಯೇ ಅನುಪಮಾ ಗುರುತಿಸಲ್ಪಡುತ್ತಾರೆ. 'ಕಣ್ಮಣಿ', 'ಹೃದಯ ಸಮುದ್ರ', 'ಒಂದು ಗಿಣಿಯ ಕಥೆ' ಮುಂತಾದವು ಅವರ ಕಥಾ ಸಂಕಲನಗಳು, 'ಹೃದಯ ವಲ್ಲಭ', 'ಹಿಮದ ಹೂ', 'ಋಣಿ', 'ಅನಂತಗೀತ', 'ಶ್ವೇತಾಂಬರಿ', 'ಎಳೆ', 'ಘೋಷ' ಮುಂತಾದವು ಅವರ ಕಾದಂಬರಿಗಳು. ನಾಟಕ, ಕಾವ್ಯ ಕ್ಷೇತ್ರಗಳಲ್ಲೂ ಕೈಯಾಡಿಸಿದ್ದಾರೆ. ಅವರ ಕಾದಂಬರಿಗಳು ನಾಲ್ಕಾರು ಆವೃತ್ತಿಗಳನ್ನು ಕಂಡು ಇತರ ಭಾಷೆಗಳಿಗೆ ಅನುವಾದಗೊಂಡು ತಮ್ಮ ಜನಪ್ರಿಯತೆಯನ್ನು ಸಾಬೀತು ಮಾಡಿವೆ.

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ (ಮುಂಬೈ ೧೯೭೮)ಯೂ ಸೇರಿದಂತೆ ಹಲವು ಮನ್ನಣೆಗಳು ಅವರಿಗೆ ಸಂದಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ನಂಜನಗೂಡು ತಿರುಮಲಾಂಬಾ ಪ್ರಶಸ್ತಿಗಳನ್ನು ಅವರಿಗೆ ನೀಡಲಾಗಿದೆ. 'ಅನುಪಮಾ ಅಭಿನಂದನ' ಎಂಬ ಒಂದು ಗ್ರಂಥವನ್ನು ಅವರಿಗೆ ಸಮರ್ಪಿಸಲಾಗಿದೆ. ಮಹಿಳಾ ಸಾಹಿತ್ಯ ಕ್ಷೇತ್ರದಲ್ಲಿ ವಿಶೇಷ ಸೇವೆ ಸಲ್ಲಿಸಿದವರಿಗಾಗಿ ಅವರ ಹೆಸರಿನಲ್ಲಿ ಒಂದು ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಇವೆಲ್ಲ ನಾಡು ಅವರಿಗೆ ತೋರಿದ ಪ್ರೀತಿ ಗೌರವಗಳಿಗೆ ಸಾಕ್ಷಿಯಾಗಿವೆ.

ಅವರ ಕೃತಿಗಳಲ್ಲಿ ಮಾಧವಿಯೊಂದೇ ಪುರಾಣ ಕಥೆಯನ್ನು ಆಧರಿಸಿದ್ದು ಕ್ರಾಂತಿಯ ಕಿಡಿ ಇಲ್ಲಿ ಉರಿಯಾಗಿ ಪ್ರಜ್ವಲಿಸಿದೆ. ಓದುಗ ವಿಮರ್ಶಕರಿಬ್ಬರ ಮೆಚ್ಚುಗೆಯನ್ನು ಪಡೆದ ವಿಶಿಷ್ಟ ಕೃತಿ ಇದಾಗಿದೆ. ಈ ಕಾರಣಕ್ಕಾಗಿ ಪೌರಾಣಿಕ ಕಾದಂಬರಿಕಾರರ ಜೊತೆಯಲ್ಲಿ ಅನುಪಮಾ ಮುಖ್ಯವಾಗಿ ಪರಿಗಣಿಸಲ್ಪಡುತ್ತಾರೆ.

**ಸತ್ಯಕಾಮ**

ಕನ್ನಡ ಪೌರಾಣಿಕ ಕಾದಂಬರಿ ಎಂದರೆ ದೇವುಡು ನರಸಿಂಹಶಾಸ್ತ್ರಿ ಎಂಬ ಹೆಸರು ಕೇಳಿ ಬರುತ್ತಿತ್ತು. ನಂತರ ಆ ಕ್ಷೇತ್ರವನ್ನು ಆಕ್ರಮಿಸಿಕೊಂಡು ಅನಭಿಷಿಕ್ತ ದೊರೆಯಾಗಿ ಆಳಿದವರು ಸತ್ಯಕಾಮ. ಅವರ ನಿಜ ನಾಮಧೇಯ ಅನಂತಾಚಾರ್ಯ ಕೃಷ್ಣಾಚಾರ್ಯ ಶಹಾಪೂರ. ಈ ವ್ಯಕ್ತಿಯ ಜೀವನ ಎಲ್ಲರಂತಲ್ಲ. ವಿಲಕ್ಷಣ, ವಿಚಿತ್ರ, ವಿಸ್ಮಯಕರ, ಮುಂದೊಂದು ಕಾಲಕ್ಕೆ ಪುರಾಣ ಪ್ರಪಂಚಕ್ಕೆ ಸೇರಬಹುದಾದಷ್ಟು ಸ್ವಾರಸ್ಯಕರವಾದದ್ದು.

ಅನಂತ ಕೃಷ್ಣಾಚಾರ್ಯರು (ಬಾಬು) ಹುಟ್ಟಿದ್ದು ಉತ್ತರ ಕರ್ನಾಟಕದ ಜಮಖಂಡಿ ಹತ್ತಿರ ಮೈಗೂರು ಎಂಬಲ್ಲಿ. ಅವರ ಊರು ಬಿಜಾಪುರ ಜಿಲ್ಲೆಯ ಕೃಷ್ಣಾನದಿ ದಡದ ಗಲಗಲಿ ಎಂಬ ಪ್ರಸಿದ್ಧ ಅಗ್ರಹಾರ. ತಂದೆ ತಾಯಿಗಳು ಸಾತ್ವಿಕ ವೈಷ್ಣವ ಬ್ರಾಹ್ಮಣರಾದ ಕೃಷ್ಣಾಚಾರ್ಯ ಮತ್ತು ರುಕ್ಮಣೀಬಾಯಿ. ಇವರ ಅಷ್ಟ ಸಂತಾನದಲ್ಲಿ ಮೊದಲಿಗರೇ ಅನಂತ ಕೃಷ್ಣಾಚಾರ್ಯ. ಹುಟ್ಟಿದ್ದು ೧೯೨೦ರ ಏಪ್ರಿಲ್ ೧೬ರಂದು. ಬಡತನದ ಮಡಿಲಲ್ಲೇ ಬೆಳೆದರೂ ಸತ್ಯಕಾಮರದ್ದು ಹುಟ್ಟಾ ಗಟ್ಟಿಮುಟ್ಟಾದ ಶರೀರ. ಮನಸ್ಸೂ ಗಟ್ಟಿ. ಹಸಿವನ್ನು ಯಾರಿಗೂ ಹೇಳದೆ ತಡೆದುಕೊಳ್ಳುವ ಹಟ. ಹನ್ನೊಂದು ದಿನದ ಉಪವಾಸವನ್ನು ಬಾಲ್ಯದಲ್ಲೇ ಕಟ್ಟುನಿಟ್ಟಾಗಿ ಮಾಡಿದ್ದರು. ಅಲ್ಲೇ ಅವರಲ್ಲಿ ಸಾಧಕನ ಲಕ್ಷಣಗಳು ಕಾಣಿಸಿಕೊಂಡವು. ಹುಡುಗನದು ತುಂಟ ಸ್ವಭಾವ. ಓದಿದ್ದು ಆಗಿನ ಮುಲ್ಕಿ ಪರೀಕ್ಷೆ (೧೯೩೪) ಬಾಗಲಕೋಟೆಯ ಪ್ರೌಢಶಾಲೆಗೆ ಸೇರಿಸಿದರೂ ಇರದೆ ಹಿಂದಿರುಗಿದರು. ಆದರೆ ಕೇಶವಶರ್ಮ ಎಂಬುವವರಿಂದ ಕನ್ನಡ ಕಾವ್ಯಗಳನ್ನೂ ಸಂಸ್ಕೃತ ಸುಭಾಷಿತಗಳನ್ನು ಮನೆಪಾಠದಲ್ಲಿ ಹೇಳಿಸಿಕೊಂಡು ಕಲಿತಿದ್ದರು. ಹದಿಹರೆಯದಲ್ಲಿ ಬೇಂದ್ರೆ, ಪುಟ್ಟಪ್ಪನವರ ಕವನಗಳನ್ನು ಓದಿದ್ದರು. ಬಾಳೂ ಎಂಬ ಗೆಳೆಯ ಅವುಗಳನ್ನು ಹಾಡಿದ್ದನ್ನು ಕೇಳಿದ್ದರು. 'ಜೀವನ ನಾಟ್ಯ ವಿಲಾಸೀ ಸಂಘ' ಸ್ಥಾಪಿಸಿ ಶೀರಂಗ, ಪುಟ್ಟಪ್ಪ ಎನ್ಕೆ, ಬೇಂದ್ರೆ ಮುಂತಾದವರ ನಾಟಕಗಳನ್ನು ಆಡಿದ್ದರು. ೧೯೪೧ರ ಹೊತ್ತಿಗೆ ಸ್ವತಃ ಆಶು ನಾಟಕವೊಂದನ್ನು ರಚಿಸಿಯೂ ಇದ್ದರು. ಈ ಎಲ್ಲ ಚಟುವಟಿಕೆಗಳು ಸತ್ಯಕಾಮರಲ್ಲಿದ್ದ ಕುಶಲ ಕಲಾಕಾರನನ್ನು ಬಯಲಿಗೆಳೆಯುತ್ತಲೇ ಅವರ ಸಾಹಿತ್ಯ ರಚನಾ ಶಕ್ತಿಯನ್ನೂ ಪ್ರೇರಿಸಿದ್ದವು.

ಹುಟ್ಟೂರಿನ ಇದೇ ವಾತಾವರಣ ಅನಂತಕೃಷ್ಣಾಚಾರ್ಯ ದೇಶಭಕ್ತಿಯನ್ನೂ ಪ್ರೇರಿಸಿತ್ತು. ಆ ಕಾಲಕ್ಕೆ ಗಲಗಲಿ ಸ್ವಾತಂತ್ರ್ಯಾ ಹೋರಾಟದ ಜ್ವಾಲೆ ಉರಿಯುತ್ತಿದ್ದ ಊರು. ಅಸಹಕಾರ ಚಳುವಳಿ, ವಿದೇಶೀ ವಸ್ತ್ರದಹನ, ಉಪ್ಪಿನ ಸತ್ಯಾಗ್ರಹ ಎಲ್ಲದರಲ್ಲೂ ಮುಂದಿದ್ದ ನಾಯಕರು ಆ ಪರಿಸರದವರೇ ಆಗಿದ್ದರು. ಬಾಬೂರಾಯರು, ಕೌಜಲಗಿ ಹನುಮಂತರಾಯರು (ಕರ್ನಾಟಕದ ಗಾಂಧಿ) ಕಾಕಾ ಕಾರಖಾನೀಸ, ಕಾಂಖಂಡಕಿ ರಾಮಾಚಾರ್ಯ ಮುಂತಾದ ಹೋರಾಟಗಾರರ ಪ್ರಭಾವದಿಂದಾಗಿ ಸತ್ಯಕಾಮ ಶಾಲಾದಿನಗಳಲ್ಲೇ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಈ ಉಜ್ವಲ ರಾಷ್ಟ್ರಭಕ್ತನ ಹೋರಾಟದ್ದೇ ಒಂದು ಪ್ರತ್ಯೇಕ ಕಥೆ. ಘೋಷಣೆ ಕೂಗುವುದು, ಟಪ್ಪಾಲು ಒಡೆಯುವುದು, ಚಾವಡಿ, ಸ್ಟೇಷನ್ ಸುಡುವುದು, ನೋಟೀಸ್ ಹಚ್ಚುವುದು ಇತ್ಯಾದಿ ಹಿಂಸಾತ್ಮಕ ಕ್ರಿಯೆಗಳಲ್ಲೂ ತೊಡಗುತ್ತಿದ್ದ ಇವರು ಅಂಚೆ ರನ್ನರನನ್ನು ಹಿಡಿಯುವ ಯತ್ನದಲ್ಲಿ ಒಮ್ಮೆ ಪೋಲೀಸರ ಕೈಗೆ ಸಿಕ್ಕಿ ಬಿದ್ದರು. (೧೯೪೩). ಮಿತ್ರನೊಬ್ಬ ಪೋಲೀಸರ ಗುಂಡೇಟು ತಿಂದು ಸೆರೆಯಾದ. ಇವರು ವೇಷ ಮರೆಸಿ ಪೋಲೀಸರಿಂದ ತಪ್ಪಿಸಿಕೊಂಡು ಕಣ್ಮರೆಯಾದರು.

ಇಲ್ಲಿಂದ ತೊಡಗಿತು ಸತ್ಯಕಾಮರ ಅಜ್ಞಾತವಾಸ. ಅನ್ನ, ಬಟ್ಟೆ, ಕಾಣದೆ ಕರ್ನಾಟಕ, ಹೈದರಾಬಾದ್, ಮುಂಬಯಿ ಪ್ರಾಂತಗಳನ್ನೆಲ್ಲ ಅಲೆದರು. ಊರಿಗೊಂದು ರೂಪ, ಹೆಸರು ಹಚ್ಚಿಕೊಂಡರು. ಜಂಗಮ ವೇಷದಲ್ಲಿ ಗುಲ್ಬರ್ಗಾದ ಶೈವ ಸಂಸಾರವೊಂದರಲ್ಲಿ ಕೆಲವು ದಿನ ತಂಗಿದ್ದು ಸತ್ಕರಿಸಿಕೊಂಡದ್ದು, ಉಡುಪಿಗೆ ಹೋಗಿ ಮಾಧ್ವ ಮಠದಲ್ಲಿ ಸಂಸ್ಕೃತ ಕಲಿತದ್ದು ಇದೇ ಅವಧಿಯಲ್ಲಿ. ಮಿತ್ರರ ಮದುವೆಗಾಗಿ ಊರಿಗೆ

ಬಂದಾಗ ಪೋಲೀಸರ ಕಣ್ಣಿಗೆ ಬಿದ್ದು ಕೈಗೆ ಸಿಕ್ಕಾಗ ತಪ್ಪಿಸಿಕೊಂಡದ್ದು ಉಡುಪಿಯಲ್ಲಿ ಕಲಿತ ತುಳು ಮಾಡನಾಡಿಯೇ. ಭಾರತ ಬಿಟ್ಟು ತೊಲಗಿ ಚಳವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಹಲವು ಬಾರಿ ಜೇಲುವಾಸ ಅನುಭವಿಸಿದ್ದರು. ಆದಾಗ್ಯೂ ಈ ಸಾಹಸೀ ವೀರ ಬ್ರಿಟಿಷರಿಗೊಂದು ಸವಾಲಾಗಿಯೇ ಉಳಿದಿದ್ದರು. ಅವರನ್ನು ಹುಡುಕಿ ಕೊಟ್ಟವರಿಗೆ ಸರಕಾರ ಬಹುಮಾನ ಘೋಷಿಸಿತ್ತಂತೆ.

ಇಂಥ ಸ್ವಾತಂತ್ರ್ಯ ಸಂಗ್ರಾಮವೀರ ಸ್ವಾತಂತ್ರ್ಯ ನಂತರ ರಾಜಕೀಯ ಕ್ಷೇತ್ರದಲ್ಲಿ ನಾಪತ್ತೆಯೇ ಆದರು. ಯಾವ ಪಕ್ಷವನ್ನೂ ಕಟ್ಟಿ ಅಧಿಕಾರ ಪಡೆದು ಆಳಿ ಋಣಕ್ಕೆ ಪ್ರತಿಫಲ ಪಡೆಯುವ ಗೋಜಿಗೆ ಹೋಗಲಿಲ್ಲ. ಸ್ವತಂತ್ರ ಸರಕಾರವೇ ಅವರ ಹೋರಾಟವನ್ನು ಗೌರವಿಸಿ ಮೈಸೂರಿನಲ್ಲಿ ಅವರಿಗಷ್ಟು ಜಮೀನು ಕೊಟ್ಟು ಋಣ ತೀರಿಸಿತು.

ಸತ್ಯಕಾಮ ಎಂಬುದು ಉಪನಿಷತ್ತುಗಳಿಂದ ಅವರು ಆಯ್ದುಕೊಂಡು ಹೆಸರು. ಅವರ ಬದುಕು ಹೆಸರನ್ನು ಅನ್ವರ್ಥವಾಗಿಸಿದೆ. ಸತ್ಯವನ್ನು ಅರಸುತ್ತ ಅವರು ಸಾಧಕರಾದರು. ದೇಶದಲ್ಲಿ ಅದರಲ್ಲೂ ಕನ್ನಡ ಸಾಹಿತಿಗಳಲ್ಲಿ ಉಳಿದವರು ಹಿಡಿಯದ ಹಾದಿಯಲ್ಲಿ ನಡೆದು ಸತ್ಯ ಶೋಧನೆಯಲ್ಲಿ ತೊಡಗಿದರು. ಯಾರೂ ಒಳ್ಳೆಯ ಭಾವನೆ ಹೊಂದಿರದ ತಂತ್ರ ಪ್ರಪಂಚವನ್ನು ಅವರು ಹೊಕ್ಕರು. ಅಲೆಮಾರಿಯಾದರು, ಗುಹೆಗಳಲ್ಲಿ ಹುದುಗಿದರು. ಸ್ಮಶಾನಗಳಲ್ಲಿ ಹೆಣಗಳೊಂದಿಗೆ ಹೆಣಗಿದರು. 'ಉಂಡು ಉಪವಾಸಿ ಬಳಸಿ ಬ್ರಹ್ಮಚಾರಿ' ಎಂಬಂಥ ಬದುಕು ನಡೆಸಿದರು. ಸಂನ್ಯಾಸಿಯಾಗಿದ್ದೇ ಸ್ತನ ಪೂಜೆ ನಡೆಸಿದರು. ಮದ್ಯ, ಮಾಂಸ, ಮೈಥುನ, ಮಂತ್ರ, ಮುದ್ರಾ ಈ ಪಂಚ 'ಮ'ಗಳ ಒಡನಾಡಿದರು. ಸಾಮಾನ್ಯನಿಗೆ ನಿಗೂಢವಾಗಿ ಕಾಣುವ ನಿರ್ಭಯದ ಸಾಹಸಗಳನ್ನು ಮಾಡಿ ವಿಶೇಷ ಸಿದ್ಧಿಗಳನ್ನು ಪಡೆದಿದ್ದರು. ಸ್ವಾತಂತ್ರ್ಯವನ್ನು ಹೊಂದಿ ಸಂತೋಷವನ್ನು ಅನುಭವಿಸಿದರು. ಈ ಸಂತೋಷ ಮತ್ತು ಅಭಯ ತಂತ್ರ ಸಾಧನೆಯ ಗುರಿಯಾಗಿತ್ತು ಅವರಿಗೆ. ತಂತ್ರವನ್ನು ಅವರೆಂದೂ ವಾಮಾಚಾರಕ್ಕೆ ಬಳಸಿಕೊಳ್ಳಲಿಲ್ಲ. ಸಾಮಾಚಾರಿಯಾಗಿಯೇ ಇದ್ದರು. ಸಂಪ್ರದಾಯಸ್ಥರಿಗಾಗಲೀ ವಿಚಾರವಾದಿಗಳಿಗಾಗಲಿ ಉಭಯತ್ರರಿಗೂ ಮೆಚ್ಚುಗೆಯಾಗದ ಆದರೆ ತಮಗೇ ಸರಿ ಎನಿಸಿದ, ಸಂತೋಷ ನೀಡಿದ, ವಿಚಿತ್ರ ವಿಶೇಷ ತಂತ್ರಲೋಕದ ಬದುಕು ನಡೆಸಿದವರು ಸತ್ಯಕಾಮ. ಸತ್ಯಕಾಮನೆಂಬ ಮಾತು ಕೃಷ್ಣನಿಗೆ ಸಲ್ಲುತ್ತದಾಗಿ ಅವರ ಅಂಕಿತನಾಮ (ಕೃಷ್ಣಾಚಾರ್ಯ)ಕ್ಕೆ ಅದೊಂದು ಪರ್ಯಾಯವೂ ಆಗಿದೆ.

ಅಜ್ಜ ಅಣ್ಣಾಚಾರ್ಯರಿಂದ ಪಡೆದಿದ್ದ ಅಂಡಲೆಯುವ ಸ್ವಭಾವ ಅವರನ್ನು ಯಾವ ಸ್ಥಳದಲ್ಲಿಯೂ ನಿಲ್ಲಗೊಡದಂತೆ ಯಾವ ವಿಷಯಕ್ಕೂ ಅಂಟಿಕೊಳ್ಳಲು ಬಿಡಲಿಲ್ಲವೆನಿಸುತ್ತದೆ. ಅಜ್ಞಾತರಾಗಿರದಿದ್ದ ಕಾಲದಲ್ಲಿ ಕೆಲವು ಕಾಲ ಅವರು ಪತ್ರಿಕೋದ್ಯಮವನ್ನು ಆತುಕೊಂಡದ್ದುಂಟು. ಮೊಹರೆ ಹನುಮಂತರಾಯರ ಸಂಯುಕ್ತ ಕರ್ನಾಟಕ, ಶ್ರೀ ಎಂಬ ಸ್ವಂತ ಪತ್ರಿಕೆ, ಕಲ್ಕಿ, ಕಲ್ಯಾಣ ಹೀಗೆ ಬೇರೆ ಬೇರೆ ಪತ್ರಿಕೆಗಳಲ್ಲಿ ದುಡಿದು, ಬರೆದು ಸಂಪಾದಿಸಿದ ಅನುಭವ ಅವರದಾಯಿತು. ಮತ್ತೆ ಇಲ್ಲೆಲ್ಲಿಯೂ ನೆಲೆ ನಿಲ್ಲಲಿಲ್ಲ.

ಸತ್ಯಕಾಮರು ನೆಲೆ ನಿಂತಿದ್ದರೆಂದು ಹೇಳಬಹುದಾಗಿದ್ದರೆ ಒಂದು ಸಾಹಿತ್ಯ ಕ್ಷೇತ್ರದಲ್ಲಿ, ಇನ್ನೊಂದು ಕೃಷಿ ಕ್ಷೇತ್ರದಲ್ಲಿ ಎನ್ನಬೇಕು. ಹುಟ್ಟಿದೂರಿನಲ್ಲಿ ಸರಕಾರ ೧೯೫೭-೫೮ರಲ್ಲಿ ಅವರಿಗೆ ನಾಲ್ಕು ಎಕರೆ ಭೂಮಿ ಕೊಟ್ಟತ್ತಷ್ಟೆ. ಈ ನೆಲ ಫಲವತ್ತಾಗಿರಲಿಲ್ಲ. ಇದನ್ನು ಬೀಗರಿಗೆ ಬದಲಾಯಿಸಿ ಕಲ್ಲಳ್ಳಿಯಲ್ಲಿ ಬೀಗರ ಹೊಲ ಪಡೆದುಕೊಂಡರು. ಮಿತ್ರ ಹಬ್ಬು ಅವರೊಂದಿಗೆ ಅತ್ಯಂತ ಶ್ರದ್ಧೆ ಶ್ರಮದಿಂದ ದುಡಿದರು. ಒಟ್ಟು ಹನ್ನೊಂದು ಎಕರೆಗಳಿಗೆ ಜಮೀನು ವಿಸ್ತರಿಸಿದರು. ಅವರ ಮಾದರಿ ತೋಟದಲ್ಲಿ ಟೊಮೆಟೊ, ಅರಿಷಿಣ, ಗೋಧಿ, ಗೋವಿನಜೋಳ, ಸೂರ್ಯಪಾನ, ತೆಂಗು, ನಿಂಬೆ ಹೀಗೆ ಎಲ್ಲ ಬೆಳೆಗಳನ್ನು ದಾಖಲೆಯ ಗರಿಷ್ಠ ಪ್ರಮಾಣದಲ್ಲಿ ತೆಗೆದರು. ಕೃಷಿ ಪಂಡಿತರೆನಿಸಿದರು. ಹಸು, ಕರು ಸಾಕಿ ಹೈನುಗಾರರಾದರು. ಬಂಧುಗಳಿಗೆ ಉಪಕಾರ ಮಾಡಿದರು. ಕಿರಿಯರಿಗೆ ಮಾರ್ಗದರ್ಶಕರಾದರು. ಹೀಗೆ ಮುವತ್ತು ವರ್ಷಗಳ ಕಾಲ ಒಕ್ಕಲುತನ ನಡೆಸಿ ಆದರ್ಶ ರೈತರಾದರು. ಮದುವೆಯಾಗದೆಯೂ ದೊಡ್ಡ ಸಂಸಾರ ನಡೆಸಿ ಸಂತೃಪ್ತಿಯಿಂದಲೇ ೧೯೯೮ರಲ್ಲಿ ಪುತಿನ, ಚದುರಂಗರೊಂದಿಗೇ ದೀಪಾವಳಿಯ ಸಂದರ್ಭದಲ್ಲಿ ಇಹಲೋಕದಿಂದ ಕಣ್ಮರೆಯಾಗಿ ತಾರಾಲೋಕದಲ್ಲಿ ಬೆಳಗಿದರು. ವಿಸ್ಮಯಕರ ಅಸಹಜ ಜಗತ್ತಿನ ಜೀವನದ ಸಾದನೆಯಂತೆಯೇ ವಾಸ್ತವ ಲೋಕದ ಜೀವದಲ್ಲಿಯೂ ಅವರು ಯಶಸ್ಸನ್ನು ಸಾಧಿಸಿ ತೋರಿಸಿ ಸಾಧನೆಯಲ್ಲಿ ಸವ್ಯಸಾಚಿ ಎಂಬುದನ್ನು ಪ್ರಮಾಣೀಕರಿಸಿದ್ದಾರೆ.

ಸತ್ಯಕಾಮ ಮೊದಲು ಬರೆದದ್ದು ಪದ್ಯ. 'ಶಾಂತ' ಎಂಬ ಕಾವ್ಯನಾಮದಿಂದ ಹದಿಹರೆಯದಲ್ಲಿ (೧೯೩೯-೪೦) ಕವನಗಳನ್ನು ಬರೆಯುತ್ತಿದ್ದರಂತೆ. 'ವೀಣೆ' ಅವರು ಮೊದಲು ಪ್ರಕಟಿಸಿದ ಕನವಸಂಕಲನ. ಶಂಕರಾಚಾರ್ಯರ ಸಂದರ್ಯ ಲಹರಿಯ ಪದ್ಯಗಳನ್ನು ಅನುವಾದಿಸಿದ್ದರಂತೆ. ಮಾತೃ ಮಂದಿರ ಎಂಬ ಚಿಕ್ಕ ಕಾವ್ಯ ಅವರ ತಾಯಿಯನ್ನು ಕುರಿತಂತೆ ರಚಿತವಾಗಿದೆ. ಉಡುಪಿಯ ಅಜ್ಞಾತವಾಸ ಅವರಲ್ಲಿ ಸಾಹಿತ್ಯ ಶಕ್ತಿಯನ್ನು ಬೆಳೆಸಿತಲ್ಲದೆ ಅವರನ್ನು ಗದ್ಯದ ಕಡೆಗೂ ತಿರುಗಿಸಿತು. 'ಅನಂತ ಜೀವನ'ವೆಂಬ ಅವರ ಸ್ವಾನುಭವದ ಕಥನ ಆಗಲೇ ಪ್ರಕಟವಾಯಿತು (೧೯೪೭). ಆ ಹೊತ್ತಿಗೆ ಸತ್ಯಕಾಮರಿಗೊಂದು ಶೈಲಿ ಸಿದ್ಧವಾಗಿತ್ತೆಂದು ಹೇಳಲಾಗಿದೆ. ಆಗಲೇ ಅವರು 'ಸತ್ಯಕಾಮ'ರಾದದ್ದು. 'ಋಷಿ ಪಂಚಮಿ' ಎಂಬ (ಐವರು) ಋಷಿಗಳನ್ನು ಕುರಿತ ಕೃತಿ ನಂತರ ಪ್ರಕಟವಾಯಿತು. ಓತಪ್ರೋತವಾಗಿ ಅವರಿಂದ ಗದ್ಯಕೃತಿಗಳು ರಚನೆಗೊಂಡಿವೆ. ತ್ರಿಸುಪರ್ಣ, ಚಂಡಪ್ರಚಂಡ, ಕೃಷ್ಣಾರ್ಪಣ, ಶೃಂಗಾರತೀರ್ಥ, ಅರ್ಧನಾರಿ, ಪುರುಷ ಸೂಕ್ತ, ಮನ್ವಂತರ, ಮನೆಮಾರು, ನಾಯಿಮೂಗು ಹೀಗೆ ಇವುಗಳಲ್ಲಿ ಸಾಮಾಜಿಕ, ರಾಜಕೀಯ ವಿಡಂಬನೆಗಳಿವೆ. ಬಹುತೇಕ ಪೌರಾಣಿಕ ವಸ್ತುಗಳನ್ನೊಳಗೊಂಡ ಸಣ್ಣಕಥೆಗಳಿವೆ. ಸಾಮಾಜಿಕ ಕಾದಂಬರಿಗಳಿವೆ. ಪಂಚ 'ಮ'ಗಳ ನಡುವೆ ಮತ್ತು ತಂತ್ರಯೋನಿ ತಂತ್ರ ಪ್ರಪಂಚವನ್ನು ಪರಿಚಯಿಸುವ ವೈವಿಧ್ಯ ಪೂರ್ಣವಾದ ವಿಶಿಷ್ಟ ಕೃತಿಗಳಾಗಿವೆ. ಒಟ್ಟು ಐವತ್ತಕ್ಕೂ ಹೆಚ್ಚು ಸಂಖ್ಯೆಯಲ್ಲಿರುವ ವೈವಿಧ್ಯ ಪೂರ್ಣವಾದ ಅವರ ಕೃತಿ ರಾಶಿಯಲ್ಲಿ ಪೌರಾಣಿಕ ಕಾದಂಬರಿಗಳದೇ ಒಂದು ಭಾಗ. ಬೆಂಕಿಯ ಮಗಳು, ವಿಪ್ರಯೋಗ, ಆಹುತಿ, ರಾಜಕ್ರೀಡೆ, ರಾಜಬಲಿ, ವಿಚಿತ್ರವೀರ್ಯ, ನಾಗರನಂಜು, ಇವು ಸತ್ಯಕಾಮರ ಸಾರ್ಥಕ ಕಾದಂಬರಿಗಳು. ಅತಿ ಹೆಚ್ಚು ಪೌರಾಣಿಕ ಕಾದಂಬರಿಗಳನ್ನು ರಚಿಸಿದ ಖ್ಯಾತಿ ಸತ್ಯಕಾಮರಿಗೇ ಸಲ್ಲುತ್ತದೆ.

**ಎಸ್.ಎಲ್. ಭೈರಪ್ಪ**

ಕನ್ನಡ ಸಮಕಾಲೀನ ಸಾಹಿತ್ಯದ ಅತ್ಯಂತ ಮಹತ್ವದ ಲೇಖಕರು ಎಸ್.ಎಲ್.ಭೈರಪ್ಪ. ಶಿವರಾಮ ಕಾರಂತರು ಮತ್ತು ಅ.ನ.ಕೃಷ್ಣರಾಯರ ನಂತರ ಪೂರ್ಣ ಪ್ರಮಾಣದ ಕಾದಂಬರಿಕಾರರಾಗಿ ಅತ್ಯಂತ ಪ್ರಭಾವೀ ಬರಹಗಾರರು. ಸುಪ್ರಸಿದ್ಧರು ಮತ್ತು ಜನಪ್ರಿಯರು. ತ.ರಾ.ಸು., ಪುರಾಣಿಕ ಕೃಷ್ಣಮೂರ್ತಿ, ಕಟ್ಟೀಮನಿ, ಇನಾಂದಾರ್ ಮುಂತಾದ ಹಲವು ಕಾದಂಬರಿಕಾರರು ಆಗಿ ಹೋಗಿದ್ದಾರಾದರೂ ಕನ್ನಡ ಕಾದಂಬರೀ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಒಂದು ಚಾರಿತ್ರಿಕ ಘಟ್ಟವಾದವರು ಭೈರಪ್ಪನವರೇ. ಮೇಲಿನ ಯಾರಿಗೂ ಸಿಗದಿದ್ದ ರಾಷ್ಟ್ರೀಯ ಅಂತರರಾಷ್ಟ್ರೀಯ ಮಟ್ಟದ ಮಾನ್ಯತೆ ಇವರಿಗೆ ಸಿಕ್ಕಿದೆ. ತಕ್ಕಯೋಗ್ಯತೆಯೂ ಅವರಿಗಿದೆ.

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕು ಸಂತೆಶಿವರ ಭೈರಪ್ಪನವರ ಹುಟ್ಟೂರು. ತಿಪಟೂರು ಪರಿಸರದಲ್ಲಿ ಬಡಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ (೧೯೩೪) ಕಡು ಬಡತನದಲ್ಲೇ ಬೆಳೆದವರು. ನುಗ್ಗೇಹಳ್ಳಿ, ಬಾಗೂರು, ಗೊರೂರು ಮುಂತಾದ ಹಳ್ಳಿಗಳು ಮತ್ತು ಮೈಸೂರಿನಲ್ಲಿ ಅವರ ಶಿಕ್ಷಣ ನಡೆಯಿತು. ಸ್ವಂತ ದುಡಿದು ಭಿಕ್ಷಾನ್ನ (ವಾರಾನ್ನ) ಮಾದಿ ಓದಿದ ಅವರ ವಿದ್ಯಾರ್ಥಿ ಜೀವನ ತುಂಬ ದಾರುಣವಾಗಿತ್ತು. ಹೋಟೆಲ್ ಸಪ್ಲೈಯರ್, ಸಿನೆಮಾ ಗೇಟ್ ಕೀಪರ್, ರೈಲ್ವೆ ಕೂಲಿ ಹೀಗೆ ಹಲವು ಅವತಾರಗಳಲ್ಲಿ ಅವರು ದುಡಿದು ಗಳಿಸಬೇಕಾಗಿ ಬಂತು. ಎಲ್ಲೆಲ್ಲೋ ಅಲೆಯಬೇಕಾಯಿತು. ಆತ್ಮಹತ್ಯೆಗೆ ಪ್ರಯತ್ನಿಸುವಷ್ಟು ನಿರಾಶರಾಗಬೇಕಾಯಿತು. ಬದುಕಿನ ಆರಂಭದಲ್ಲೇ ಹೋರಾಟ ಮಾಡಿದ ಸಾಹಸಿ ಕೊನೆಗೂ ಯಶಸ್ವಿಯಾದರು. ಸಂಸಾರದ ಸಾವು ನೋವುಗಳ ಬೆಂಕಿಯಲ್ಲಿ ಬೆಂದು ಪುಟಗೊಂಡರು. ಮೈಸೂರು ವಿಶ್ವವಿದ್ಯಾನಿಲಯದ ಬಿ.ಎ. ಆನರ್ಸ್ ಮತ್ತು ಎಂ.ಎ., ಬರೋಡ ವಿಶ್ವವಿದ್ಯಾನಿಲಯದ ಪಿಎಚ್ .ಡಿ. ಪದವಿಗಳನ್ನು ಪಡೆದ ಭೈರಪ್ಪ ಹುಬ್ಬಳ್ಳಿ, ಮೈಸೂರು ಮುಂತಾಗಿ ರಾಜ್ಯದೊಳಗಿನ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿ ದುಡಿದದ್ದಲ್ಲದೆ ದೂರದ ದೆಹಲಿ, ಗುಜರಾತಗಳಲ್ಲಿಯೂ ಉದ್ಯೋಗ ಮಾಡಿದರು. ಕಳೆದ ಕೆಲವು ವರ್ಷಗಳಿಂದ ಮೈಸೂರಿನಲ್ಲಿ ನಿವೃತ್ತ ಜೀವನ ನಡೆಸುತ್ತಿದ್ದಾರೆ.

ಪ್ರವಾಸಿ ಪ್ರಿಯರಾದ ಭೈರಪ್ಪನವರು ಚಿಕ್ಕಂದಿನಿಂದಲೂ ಊರೂರು ಸುತ್ತುವ ಸ್ವಭಾವ. ದೊಡ್ಡವರಾದ ಮೇಲೆ ಉದ್ಯೋಗದ ಕಾರಣಕ್ಕಷ್ಟೇ ಅಲ್ಲದೆ ನೋಡಿ ತಿಳಿಯಬೇಕೆಂಬ ಕುತೂಹಲವನ್ನು ತಣಿಸಿಕೊಳ್ಳುವುದಕ್ಕಾಗಿ ಉತ್ತರ ಭಾರತದ ಅನೇಕ ಊರುಗಳಿಗೆ, ಹಿಮಾಲಯ,

ಕೇದಾರ, ಮಾನಸ ಸರೋವರಗಳಿಗೆ, ಮಲೆನಾಡಿನ ಬೆಟ್ಟ ಕಾಡುಗಳಿಗೆ ಹಲವು ಬಾರಿ ಭೇಟಿ ಕೊಟ್ಟಿದ್ದಾರೆ. ಜಪಾನ್, ಇಂಗ್ಲೆಂಡ್, ಅಮೆರಿಕ, ಫ್ರಾನ್ಸ್, ಈಜಿಪ್ಟ್, ಜರ್ಮನಿ ಮುಂತಾದ ವಿದೇಶಗಳ ಪ್ರವಾಸ ಕೈಗೊಂಡಿದ್ದಾರೆ.

ಸ್ವಾನುಭವ ಮತ್ತು ಲೋಕಾನುಭವಗಳಿಂದ ಶ್ರೀಮಂತರಾಗಿರುವ ಭೈರಪ್ಪ ತಮ್ಮ ಅನುಭವವನ್ನು ಸಾಹಿತ್ಯ ಕೃತಿಗಳಾಗಿ ಪರಿವರ್ತಿಸಿದ್ದಾರೆ. ತತ್ವಶಾಸ್ತ್ರ, ಇತಿಹಾಸ ಮುಂತಾದ ಹಲವು ಶಾಸ್ತ್ರಗಳ ಜ್ಞಾನ, ಇಂಗ್ಲಿಷ್, ಹಿಂದಿ ಮುಂತಾದ ಭಾಷೆಗಳ ಪಾಂಡಿತ್ಯ ಇವರ ಕೃತಿಗಳಲ್ಲಿ ವ್ಯುತ್ಪತ್ತಿಯಾಗಿ ಕೆಲಸ ಮಾಡಿವೆ. ಅವರ ಸೌಂದರ್ಯ ದೃಷ್ಟಿ ಮತ್ತು ಪ್ರತಿಭೆಗಳು ಇವುಗಳೊಂದಿಗೆ ಸೇರಿ ಸುಂದರವಾದ ಕಾದಂಬರಿಗಳು ಸಾಲುಗಟ್ಟಿ ಸೃಷ್ಟಿಯಾಗಿವೆ.

ಭೈರಪ್ಪನವರು ಧರ್ಮಶ್ರೀ ಯಿಂದ ಸಾರ್ಥದ ವರೆಗೆ ಹದಿನೆಂಟು ಬೃಹದ್ ಗಾತ್ರದ ಉತ್ತಮ ಗುಣದ ಕಾದಂಬರಿಗಳನ್ನು ಸೃಷ್ಟಿಸಿದ್ದಾರೆ. ವಂಶವೃಕ್ಷ, ದಾಟು, ಸಾಕ್ಷಿ, ಗೃಹಭಂಗ ಮುಂತಾದವು. ಇವುಗಳಲ್ಲಿ ಮುಖ್ಯವಾದವು ಸತ್ಯ ಮತ್ತು ಸೌಂದರ್ಯ, ಕಥೆ ಮತ್ತು ಕಥಾವಸ್ತು ಮುಂತಾಗಿ ನಾಲ್ಕೈದು ಸೃಜನೇತರ ವೈಚಾರಿಕ ಕೃತಿಗಳನ್ನು ಕೆಲವು ಕಥೆಗಳನ್ನೂ ಬರೆದಿದ್ದಾರೆ. ಅವರ ಬಹುತೇಕ ಕಾದಂಬರಿಗಳು ಹಲವು ಭಾಷೆಗಳಿಗೆ ಅನುವಾದಗೊಂಡು ಭಾರತೀಯ ಸಾಹಿತ್ಯದಲ್ಲಿಯೇ ಭೈರಪ್ಪನವರಿಗೆ ಮುಖ್ಯ ಸ್ಥಾನಗಳಿಸಿಕೊಟ್ಟಿವೆ. ೧೯೯೬ರಲ್ಲಿ ಪ್ರಕಟವಾದ ಭಿತ್ತಿ ಅವರ ಜೀವನಚರಿತ್ರೆ, ಅವರ ಸಾಹಸಮಯ ಬದುಕಿನ ಕುತೂಹಲಕಾರಿ ಘಟನೆಗಳನ್ನು ಒಳಗೊಂಡು ಕಾದಂಬರಿಯಷ್ಟೇ ಆಕರ್ಷಕವಾಗಿದೆ. ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು, ರಾಜ್ಯೋತ್ಸವ ಪ್ರಶಸ್ತಿಗಳೂ ಸೇರಿದಂತೆ ಹಲವಾರು ಮನ್ನಣೆಗಳು ಅವರಿಗೆ ಸಂದಿವೆ. ೧೯೯೯ರ ಕನಕಪುರ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ಅಧ್ಯಕ್ಷತೆಯ ಗೌರವ ದೊರೆತಿದೆ. ಸದ್ಯದ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಹೆಚ್ಚು ಓದುಗರನ್ನು ಹೊಂದಿರುವ, ಮೌಲಿಕ ಕೃತಿಗಳ ಕೊಡುಗೆಯಿಂದಾಗಿ ಬಹುಚರ್ಚಿತ ವಿಸ್ಮಯಕರ ಸೃಜನಶೀಲ ಪ್ರತಿಭೆಯ ಕಾರಣಕ್ಕೆ ಗೌರವಾನ್ವಿತರಾಗಿರುವ ಲೇಖಕ ಭೈರಪ್ಪನವರು. ಅವರ ಕೃತಿ ರಾಶಿಗಳಲ್ಲಿ ಒಂದೇ ಒಂದು ಪೌರಾಣಿಕ ಕಾದಂಬರಿ 'ಪರ್ವ' ತನ್ನ ಪ್ರಕಾರದಲ್ಲಿ ಅತ್ಯಂತ ಮಹತ್ವದ್ದಾಗಿದೆ.

[1]ಬೆಳಗೆರೆ ಕೃಷ್ಣಶಾಸ್ತ್ರಿ – ನೆನಪ ಬುತ್ತಿಯ ಗಂಟು – ದೇವುಡು ದರ್ಶನ – ೧೯೯೭ ಪುಟ ೫೦, ೫೧, ೫೮,೫೯

[2]ರುದ್ರ ಪ್ರತ್ಯಕ್ಷನಾಗುವುದು. ದೇವತೆಗಳು ಬಂದು ಮಾತನಾಡುವುದು, ಇವೆಲ್ಲ ಸ್ವಾನುಭವ ಎಂದು ಮಹಾಬ್ರಾಹ್ಮಣದ ಮುನ್ನುಡಿಯಲ್ಲಿ ದೇವುಡು ಹೇಳುವ ಮಾತನ್ನು ಗಮನಿಸಬೇಕು.

[3]ಡಾ. ಎಂ.ಎಸ್. ಪಾಟೀಲ – ತ.ರಾ.ಸು. ಅವರ ಕಾದಂಬರಿಗಳು – ೧೯೯೩ ತ.ರಾ.ಸು. ಹಾಗೂ ಅವರ ಪರಿಸರ ಪುಟ ೩೩.

**ಹೆಚ್.ವಿ. ಸಾವಿತ್ರಮ್ಮ**

ಹೆಚ್.ವಿ. ಸಾವಿತ್ರಮ್ಮನವರು ಕನ್ನಡದ ಹಿರಿಯ ಬರಹಗಾರ್ತಿ. ೧೯೧೩ರಲ್ಲಿ ಜನಿಸಿದ ಸಾವಿತ್ರಮ್ಮ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ್ಥಾಪಕರಲ್ಲೊಬ್ಬರು. ಮೈಸೂರು ವಿ.ವಿಯ ಕುಲಪತಿಗಳಲ್ಲೊಬ್ಬರು ಆಗಿದ್ದ ಸಾರಸ್ವತ ಲೋಕದ ಪ್ರಸಿದ್ಧ ವ್ಯಕ್ತಿ ಹೆಚ್.ವಿ.ನಂಜುಡಯ್ಯನವರ ಮೊಮ್ಮಗಳು. ಬೌದ್ಧಿಕವಾಗಿ ಶ್ರೇಷ್ಠ ವಾತಾವರಣದ ಜೊತೆಗೆ ಆರ್ಥಿಕವಾಗಿಯೂ ಶ್ರೀಮಂತ ಪರಿಸರದಲ್ಲಿ ಬೆಳೆದವರು. ಮನೆಯ ಹಿರಿಯರು ದೊಡ್ಡ ದೊಡ್ಡ ಹುದ್ದೆಗಳನ್ನಲಂಕರಿಸಿದ ಸುಸಂಸ್ಕೃತರು. ಪತಿ ನಾರಾಯಣರಾವ್ ವಿದೇಶದಲ್ಲಿ ವಿದ್ಯಾಭ್ಯಾಸ ನಡೆಸಿದವರು. ಸಾವಿತ್ರಮ್ಮನವರು ಕೂಡ ಚಿಕ್ಕಂದಿನಿಂದ ಇಂಗ್ಲಿಷ್ ಶಿಕ್ಷಣವನ್ನು ಪಡೆದು ಅದರಲ್ಲೇ ಹೆಚ್ಚಿನ ಅಭ್ಯಾಸ ನಡೆಸಿದರು. ಇಂಗ್ಲಿಷ್ ಸಾಹಿತ್ಯದಲ್ಲೇ ಅವರಿಗೆ ಹೆಚ್ಚಿನ ಪ್ರವೇಶ. ಕನ್ನಡ ಸಾಹಿತ್ಯದ ಗಂಭೀರ ಅಧ್ಯಯನವನ್ನು ಅವರು ಲೇಖಕಿಯಾದ ಮೇಲೆ ನಡೆಸಿದರು.

ಸಾವಿತ್ರಮ್ಮನವರದು ಗಂಭೀರ ಸ್ವಭಾವ. ಎಲ್ಲರೊಡನೆಯೂ ಹೆಚ್ಚು ಬೆರೆಯದ ಮೌನಿ. ಅಂತರ್ಮುಖತೆ ಅವರಿಗೆ ಸಹಜವಾಗಿ ಬಂದಿದ್ದ ಪ್ರವೃತ್ತಿ. ಆದರೂ ನಿಕಟವಾದವರೊಂದಿಗೆ ಮನಬಿಚ್ಚಿ ಮಾತನಾಡುವ ಸರಳತೆ ಸೌಜನ್ಯಶೀಲ ಅವರಲ್ಲಿದ್ದವು.

ವಯೋಮಾನದಿಂದ ಹಿರಿಯರಾಗಿದ್ದರೂ ಮನೋಭಾವದಿಂದ ಅವರು ಅತ್ಯಂತ ಆಧುನಿಕರು. ಸಮಕಾಲೀನ ಸಮಸ್ಯೆಗಳಿಗೆ ತೀವ್ರವಾದ ಸ್ಪಂದನೆ ಅವರಿಂದ ಬಂತು. ನಾಡಿನ ಸ್ವಾತಂತ್ರ್ಯ, ಸ್ತ್ರೀ ಸ್ವಾತಂತ್ರ, ಕೋಮುಗಲಭೆ ಮುಂತಾದ ಸಾಮಾಜಿಕ, ರಾಜಕೀಯ ಘಟನಾವಳಿಗಳಿಗೆ ಮುಖ ತಿರುಗಿಸಿ ಸಂಪ್ರದಾಯ ನಿಷ್ಠ ಸಂಸಾರದಲ್ಲಿ ಅವರು ಮುಳುಗಿ ಹೋದವರಲ್ಲ. ಅವರೊಳಗೆ ಒಬ್ಬ ಸೌಮ್ಯ ಕ್ರಾಂತಿಕಾರಿಣಿಯ ತುಡಿತ ನಡೆದೇ ಇತ್ತು.

ಕಥಾ ಸಾಹಿತ್ಯದ ಮೂಲಕ ಬರಹಲೋಕಕ್ಕೆ ಅವರ ಪ್ರವೇಶವಾಯಿತು. ಅವರ ಸಣ್ಣಕತೆಗಳು ಕಥಾ ಸ್ಪರ್ಧೆಯಲ್ಲಿ ಬಹುಮಾನಗಳನ್ನೂ, ಹಿರಿಯ ಲೇಖಕರ ಪ್ರೋತ್ಸಾಹವನ್ನೂ ಪಡೆದವು. 'ನಿರಾಶ್ರಿತೆ', 'ಮರುಮದುವೆ', 'ಪ್ರತೀಕ್ಷೆ', 'ಲಕ್ಷ್ಮಿ', 'ಸರಿದಬೆರಳು' ಇವು ಅವರ ಕಥಾ ಸಂಕಲನಗಳು. ಸಹಜವಾಗಿ ಹೆಣ್ಣಿನ ಬದುಕನ್ನೇ ಇವು ವಸ್ತುವಾಗಿ ಉಳ್ಳವು. ಆದರೆ ಆ ಕಾಲದ ಆಶಯಗಳಾದ ತಾಯ್ತನ, ಪಾತಿವ್ರತ್ಯ, ದಾಸ್ಯ ಮುಂತಾದವನ್ನು ಮೀರಿ ಹೆಣ್ಣಿನ ದಿಟ್ಟತನ, ಸ್ವಂತಿಕೆ, ಪ್ರತಿಭಟನೆ ಮುಂತಾದವುಗಳನ್ನು ಅವರ ಕತೆಗಳು ಅಭಿವ್ಯಕ್ತಿಸಿದ್ದು ಅವುಗಳ ವೈಶಿಷ್ಟ್ಯ. ಈ ಸಾಹಿತ್ಯ ಕೃತಿಗಳ ಮೂಲ ಅನುಭವ ಸ್ವಂತದಲ್ಲವೆಂದು ಅವರೇ ಹೇಳಿದ್ದಾರೆ. ಅಂದರೆ ತಮ್ಮದಲ್ಲದ ಅನುಭವಗಳನ್ನು ಸ್ವಂತದವೆಂಬಂತೆಯೇ ಮೂಡಿಸಿರುವುದು ಅವರ ತನ್ಮಯತೆ ಮತ್ತು ಕೌಶಲಗಳಿಗೆ ದ್ಯೋತಕವಾಗಿದೆ.

ಸಾವಿತ್ರಮ್ಮನವರು ಅನೇಕ ಶ್ರೇಷ್ಠ ಕೃತಿಗಳನ್ನು ಅನುವಾದಿಸಿಕೊಟ್ಟು ಭಾಷಾಂತರ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇವು ಕೇವಲ ಶುದ್ಧ ಸಾಹಿತ್ಯ ಕೃತಿಗಳಾಗಿರದೆ ಇತರ ಶಿಸ್ತುಗಳನ್ನು ಕುರಿತ ವಿದ್ವತ್ ಕೃತಿಗಳೂ ಆಗಿವೆ. 'ಮಧ್ಯಯುಗದ ಭಾರತದ ಚರಿತೆ', 'ಮಹಾತ್ಮಾ ಗಾಂಧಿ : ಜಗತ್ತಿಗೆ ಅವರ ಸಂದೇಶ', 'ಗೋರಾ', 'ಮನೆ ಜಗತ್ತು', 'ಹಸಿವೋ ಹಸಿವು' , 'ಶಶಿಲೇಖಾ', 'ನೀಲನೇತ್ರೆ' ಇವು ಅವರ ಮುಖ್ಯ ಅನುವಾದ ಕೃತಿಗಳು.

'ಜೀವನ ಮತ್ತು ಕಾರ್ಯ' ಎಂಬುದಾಗಿ ತಮ್ಮ ತಾತನ ಜೀವನ ಚರಿತ್ರೆಯನ್ನು ರಚಿಸಿರುವ ಸಾವಿತ್ರಮ್ಮನವರು ಅಜ್ಜಿಯ ಕಥೆಗಳೆಂಬ ಮಕ್ಕಳ ಸಾಹಿತ್ಯ ಕೃತಿಯನ್ನೂ ರಚಿಸಿದ್ದಾರೆ. ಅವರು ಬರೆದ ಎರಡೇ ಕಾದಂಬರಿಗಳು ಬರಹಗಾರ್ತಿಯಾಗಿ, ಪ್ರಜ್ಞಾವಂತ ಸ್ತ್ರೀಯಾಗಿ ಅವರು ಮಾಗಿನ ನಂತರ, ಅವರ ಜೀವನದ ಕೊನೆಯ ಘಟ್ಟದಲ್ಲಿ ಬಂದವು. **ಸೀತೆ ರಾಮ ರಾವಣ** (೧೯೮೦), **ವಿಮುಕ್ತಿ** (೧೯೯೦). ಇವು ಪ್ರಕಟವಾದ ನಂತರವೇ ಅವರು ಪ್ರಸಿದ್ಧರಾದರು. ಅಷ್ಟರಲ್ಲೇ ಸಲ್ಲಬೇಕಾಗಿದ್ದ ಕೆಲವು ಮನ್ನಣೆಗಳು ಅವರಿಗೆ ಸಂದಿದ್ದವಾದರೂ ಸಾಮಾನ್ಯ ಸಾಹಿತ್ಯಾಸಕ್ತರ ಗಮನವನ್ನು ಅವರು ಸೆಳೆದಿರಲಿಲ್ಲವೆನ್ನಬೇಕು. ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಶಸ್ತಿ, ಅನುಪಮಾ ಪ್ರಶಸ್ತಿ, ದೇಜಗೌ ಪ್ರತಿಷ್ಠಾನದ ಸಾವಿತ್ರಮ್ಮ ದತ್ತಿನಿಧಿ ಪ್ರಶಸ್ತಿ, ಲಿಪಿ ಪ್ರಜ್ಞೆ ಪ್ರಶಸ್ತಿ ಅವರನ್ನು ಹುಡುಕಿ ಬಂದ ಗೌರವಗಳು. ಇಂಥ ಯಾವ ಸನ್ಮಾನಗಳ ಬಗೆಗೂ ಸ್ವತಃ ಸಾವಿತ್ರಮ್ಮನವರು ತಲೆಕೆಡಿಸಿಕೊಂಡವರಲ್ಲ. ನಿರ್ಲಿಪ್ತ, ಕ್ರಿಯಾಶೀಲ, ಗಂಭೀರ ವ್ಯಕ್ತಿತ್ವದಿಂದ ಎಲ್ಲರ ಗೌರವ ಆದರ ಗಳಿಸಿದ್ದ ಸಾವಿತ್ರಮ್ಮನವರು ತುಂಬು ಜೀವನದ ನಂತರ ಕಳೆದ ಶತಮಾನದ ಕಡೆಯ ದಶಕದಲ್ಲಿ (೧೯೯೫) ಲೋಕವನ್ನೂ, ಸಾರಸ್ವತ ಲೋಕವನ್ನೂ ತ್ಯಜಿಸಿದರು.

'ವಿಮುಕ್ತೆಯ ಹಾದಿ' ಎಂಬ ಅವರ ಬದುಕು ಬರಹಗಳನ್ನು ವಿಮರ್ಶಿಸುವ ಗ್ರಂಥವೊಂದು ಈಚೆಗೆ (೧೯೯೮) ಜಾಗೃತಿ ಮಹಿಳಾ ಪ್ರಕಾಶನದಿಂದ ಪ್ರಕಟವಾಗಿದೆ.

**ರಂ.ಶ್ರೀ. ಮುಗಳಿ**

ರಂಗನಾಥ ಶ್ರೀನಿವಾಸ ಮುಗಳಿ ಕನ್ನಡ ಸಾಹಿತ್ಯ ಕ್ಷೇತ್ರದ ದೊಡ್ಡ ಹೆಸರುಗಳಲ್ಲಿ ಒಂದು. ಸುಪ್ರಸಿದ್ಧ ವಿದ್ವಾಂಸರಾಗಿರುವ ಮುಗಳಿ ಸೃಜನಶೀಲ ಲೇಖಕರಾಗಿಯೂ ಖ್ಯಾತರಾಗಿದ್ದಾರೆ. ಅವರ ಹುಟ್ಟೂರು ಧಾರವಾಡ ಜಿಲ್ಲೆ ಹೊಳೆ ಆಲೂರು, ಹುಟ್ಟಿದ್ದು ೧೯೦೯ರಲ್ಲಿ. ೧೯೯೩ರಲ್ಲಿ ನಿಧನರಾದ ಮುಗಳಿ ನಾಡಿನ ಒಳ ಹೊರಗೆ ಅಧ್ಯಾಪಕರಾಗಿ ಮತ್ತು ಇತರ ಇಲಾಖೆಗಳಲ್ಲಿ ಇತರ ಪದವಿಗಳಲ್ಲಿ ದುಡಿದಿದ್ದಾರೆ. ಶಾಲಾ ಶಿಕ್ಷಣವನ್ನು ಉತ್ತರ ಕರ್ನಾಟಕದಲ್ಲೇ ಪಡೆದ ಶ್ರೀಯುತರ ಉನ್ನತ ಶಿಕ್ಷಣ ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ ನಡೆಯಿತು. ಪುಣೆ ವಿಶ್ವವಿದ್ಯಾನಿಲಯ ಅವರಿಗೆ ಡಾಕ್ಟರೇಟ್ ನೀಡಿತು. ಪ್ರೌಢಶಾಲಾ ಅಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ ಮುಗಳಿ ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಪ್ರಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದರು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಮೊದಲ ಕನ್ನಡ ಪ್ರಾಧ್ಯಾಪಕರಾಗಿದ್ದು ವಿಭಾಗಕ್ಕೆ ತಳಹದಿ ಹಾಕಿಕೊಟ್ಟರು. ಇಂಗ್ಲೆಂಡ್, ಫ್ರಾನ್ಸ್, ಹಾಲೆಂಡ್ ಹೀಗೆ ಹಲವು ದೇಶಗಳಲ್ಲಿ ಪ್ರವಾಸ ಮಾಡಿದ ವಿಶೇಷ ಅನುಭವ ಅವರ ಸಾಂಸ್ಕೃತಿಕ ಚಟುವಟಿಕೆಗಳ ಹಿನ್ನೆಲೆಗಿತ್ತು.

'ಕನ್ನಡ ಸಾಹಿತ್ಯ ಚರಿತ್ರೆ' ನಮ್ಮ ಭಾಷೆಗೆ ಅವರು ನೀಡಿದ ಆಚಾರ್ಯ ಕೃತಿ. ಈಗಾಗಲೇ ೧೦ ಮುದ್ರಣಗಳನ್ನು ಕಂಡ ಅಪರೂಪದ ಶಾಸ್ತ್ರಗ್ರಂಥ. 'ಕನ್ನಡ ಸಾಹಿತ್ಯದ ಇತಿಹಾಸ' ಭಾಷೆಯ ಚರಿತ್ರೆಗೆ ಅವರು ನೀಡಿದ ಇನ್ನೊಂದು ಮೌಲಿಕ ಕಾಣಿಕೆ. ಈ ಕೃತಿ ಹಲವು ಭಾಷೆಗಳಿಗೆ ಅನುವಾದವಾಗಿದೆ. ಇಂಗ್ಲಿಷಿನಲ್ಲಿಯೂ ಕನ್ನಡ ಸಾಹಿತ್ಯ ಚರಿತ್ರೆಗೆ ಸಂಬಂಧಿಸಿದ ಕೃತಿಗಳನ್ನು ರಚಿಸಿದ್ದಾರೆ. ಒಟ್ಟಾರೆ ಐವತ್ತಕ್ಕೂ ಮಿಗುವ ಅವರ ಸಾಹಿತ್ಯ ಕೃತಿ ರಾಶಿಯಲ್ಲಿ ವಿದ್ವತ್ ಕೃತಿಗಳಲ್ಲದೆ, ಸಾಹಿತ್ಯ ವಿಮರ್ಶೆ, ಜೀವನ ಚರಿತ್ರೆ, ವೈಚಾರಿಕ ಬರಹ, ಅನುವಾದ ಇವೆಲ್ಲ ಸೇರಿವೆ. 'ರಸಿಕರಂಗ' ಎಂಬ ಕಾವ್ಯನಾಮದಿಂದ ಆರೇಳು ಕವನ ಸಂಕಲನಗಳನ್ನೂ, ಹಲವು ನಾಟಕಗಳನ್ನೂ ಸಣ್ಣಕತೆ, ಕಾದಂಬರಿಗಳನ್ನೂ ರಚಿಸಿದ್ದಾರೆ. ಅವರ ನಾಲ್ಕು ಕಾದಂಬರಿಗಳಲ್ಲಿ ಸಾಮಾಜಿಕ, ಐತಿಹಾಸಿಕವಲ್ಲದೆ ಪೌರಾಣಿಕ ಕೃತಿಯೂ ಸೇರಿದೆ. 'ಅನ್ನ' ಅವರಿಗೆ ಸಾಕಷ್ಟು ಕೀರ್ತಿ ತಂದುಕೊಟ್ಟ ಕಾದಂಬರಿ. 'ಅಗ್ನಿವರ್ಣ' ಉತ್ತಮ ಪೌರಾಣಿಕ ಕಾದಂಬರಿಗಳಲ್ಲಿ ಒಂದಾಗಿದೆ.

ರಾಜ್ಯ, ಕೇಂದ್ರ ಮಟ್ಟದ ಹಲವು ಪ್ರಶಸ್ತಿಗಳಿಂದ ಗೌರವಿಸಲ್ಪಟ್ಟಿರುವ ಮುಗಳಿ ತುಮಕೂರು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ಅಲಂಕರಿಸಿದ್ದರು.

**ಸಮೇತನಹಳ್ಳಿ ರಾಮರಾಯ**

ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಒಬ್ಬ ವಿಶಿಷ್ಟ ಸಾಹಿತಿ ಸಮೇತನಹಳ್ಳಿಯವರು. ಈ ಕಾಲದ ಬಹುತೇಕ ಸಾಹಿತಿಗಳಂತೆ ವಿಶ್ವವಿದ್ಯಾನಿಲಯಗಳಿಗೆ ಶಿಕ್ಷಣ ರಂಗದ ಅಕಾಡೆಮಿಕ್ ವಲಯಕ್ಕೆ ಸೇರಿದವರಾಗಿರದೆ ಆರೋಗ್ಯ ಇಲಾಖೆಯ ಒಬ್ಬ ಸಾಧಾರಣ ನೌಕರನಾಗಿದ್ದು ಸಾಹಿತ್ಯ ಕ್ಷೇತ್ರದಲ್ಲಿ ಬಹಳಷ್ಟು ಸಾಧಿಸಿದರು. ಆರೋಗ್ಯ ಇಲಾಖೆಯಲ್ಲಿ ವೈದ್ಯರಾಗಿ, ಜೊತೆಗೆ ಸಾಹಿತಿಗಳಾಗಿ

ಪ್ರಸಿದ್ಧರಾಗಿರುವ ಕೆಲವರಿದ್ದಾರಾದರೂ ಅದಕ್ಕಿಂತ ಕೆಳದರ್ಜೆಯ ನೌಕರನೊಬ್ಬ ಸಾಹಿತಿಯಾಗಿ ಪ್ರಸಿದ್ಧನಾದ ಉದಾಹರಣೆ ಇಲ್ಲವೆನಿಸುತ್ತದೆ. ಆಧುನಿಕ ಸಾಹಿತ್ಯದ ಎಲ್ಲ ಪ್ರಮುಖ ಪ್ರಕಾರಗಳಲ್ಲಿ ಗಣನೀಯ ಸಂಖ್ಯೆಯಲ್ಲಿ ಕೃತಿರಚಿಸಿ ಮೌಲಿಕ ಕೊಡುಗೆ ನೀಡಿದ್ದು ಅವರ ಹಿರಿಮೆಗೆ ಕಾರಣವಾಗಿದೆ. ಭಾಷಾ ಶೈಲಿಯ ದೃಷ್ಟಿಯಿಂದಲಂತೂ ಕನ್ನಡ ಗದ್ಯಕಾರರಲ್ಲಿ ಸಮೇತನಹಳ್ಳಿ ವಿಶೇಷ ಗಮನ ಸೆಳೆಯುತ್ತಾರೆ.

ಅವರ ಹೆಸರಿನೊಂದಿಗೆ ಶಾಶ್ವತವಾಗಿ ಅಂಟಿಕೊಂಡಿರುವ ಬೆಂಗಳೂರು ಜಿಲ್ಲೆ ಹೊಸಕೋಟೆ ತಾಲ್ಲೂಕು ಸಮೇತನಹಳ್ಳಿ ಅವರ ಹುಟ್ಟೂರು. ಅದೇ ಊರಿನಲ್ಲಿ ತಲೆ ತಲಾಂತರಗಳಿಂದ ಬಾಳುತ್ತಿದ್ದ ಎರಡು ಕುಟುಂಬಗಳ ಸದಸ್ಯರಾಗಿದ್ದ ಶ್ರೀನಿವಾಸರಾವ್ ಮತ್ತು ರುಕ್ಮಿಣಿಯಮ್ಮ ಇವರ ತಂದೆ ತಾಯಿಗಳು. ಬಡತನವನ್ನೇ ಉಂಡು ಹಾಸಿ ಹೊದೆಯುತ್ತಿದ್ದ ಕಡು ಕಷ್ಟದ 'ಕೋಟೆಮನೆ'ಯಲ್ಲಿ ಅವರ ಬಾಲ್ಯ ಕಳೆಯಿತು. ಬಲು ಬವಣೆಯಲ್ಲಿ ಮೈಸೂರು ಬೆಂಗಳೂರುಗಳಲ್ಲಿ ಶಾಲಾ ಶಿಕ್ಷಣವನ್ನು ಮುಗಿಸಿ ಅಂದಿನ ಎಸ್.ಎಸ್.ಎಲ್.ಸಿ. ಪಾಸಾದರು. ಹೆಚ್ಚಿನ ಓದು ಅವರಿಗೆ ನಿಲುಕದಾಗಿತ್ತು. ವಿವಿಧ ಇಲಖೆಗಳಲ್ಲಿ ಚಾಕರಿ ಹುಡುಕಿ ಕಡೆಗೆ ಆರೋಗ್ಯ ಇಲಾಖೆಯ ಹೆಲ್ತ್ ಇನ್ಸ್ಪೆಕ್ಟರ್ ಆಗಿ ಬೆಂಗಳೂರು, ಮಧುಗಿರಿ, ಪಾಂಡವಪುರ, ಮಂಡ್ಯ ಹೀಗೆ ಹಲವಾರು ಊರುಗಳಲ್ಲಿ ಉದ್ಯೋಗದಲ್ಲಿದ್ದು ಶಿವಳ್ಳಿಯಲ್ಲಿ ನಿವೃತ್ತರಾದರು. ಈ ಉದ್ಯೋಗ ದೊರೆಯುವ ಮೊದಲು ಹೋಟೆಲ್ ಮಾಣಿಯಾಗಿ ಕೆಲಸ ಮಾಡುವ ದಾರುಣತೆಯೂ ಅವರಿಗೆ ಬಂದಿತ್ತು.

ಭೌತಿಕ ಬದುಕು ಬಡತನದ್ದಾದರೂ ಸಾಂಸ್ಕೃತಿಕವಾಗಿ ಸಮೇತನಹಳ್ಳಿ ಶ್ರೀಮಂತರು. ಕರ್ತವ್ಯ ನಿಷ್ಠೆ ಎಲ್ಲರೊಂದಿಗೆ ಬೆರೆಯುವ ಪ್ರವೃತ್ತಿಗಳು ಎಲ್ಲರೂ ಅವರನ್ನು ಪ್ರೀತಿಸುವಂತೆ ಮಾಡಿದ್ದವು. ತಮ್ಮ ಮೂವತ್ತನೆಯ ವಯಸ್ಸಿಗೇ ಮೊದಲ ಕೃತಿ ಪ್ರಕಟಿಸಿದ ರಾಮರಾಯರು ಸುಮಾರು ೫೦ ವರ್ಷಗಳ ಕಾಲ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ನಡೆಸಿದರು. ಪ್ರಕಟವಾಗಿರುವ ಸುಮಾರು ೩೦ ಕೃತಿಗಳಲ್ಲದೆ ಕೆಲವು ಅಪ್ರಕಟಿತವಾಗಿ ಉಳಿದುಕೊಂಡಿವೆ. ಮುಖ್ಯವಾಗಿ ಅವರನ್ನು ನಾಟಕಕಾರರೆಂದೇ ಗುರುತಿಸಬಹುದಾದರೂ ಹೆಚ್ಚು ಕಡಿಮೆ ಅಷ್ಟೇ ಸಂಖ್ಯೆಯಲ್ಲಿ ಕಾದಂಬರಿಗಳನ್ನೂ ರಚಿಸಿದ್ದಾರೆ. ಒಂದಿಷ್ಟು ಸಣ್ಣ ಕತೆಗಳು, ಒಂದು ಕವನ ಸಂಕಲನ (ಉದಯೋಧ್ಯಾನ) ಮತ್ತೊಂದು ಮಹಾಕಾವ್ಯ-ಇವು ಕನ್ನಡ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆಗಳು. 'ಶಾಕುಂತಲ' ಮಹಾಕಾವ್ಯ ಹಲವು ಕಾರಣಗಳಿಂದಾಗಿ ಮಹತ್ವ ಪಡೆದಿದೆ. ಇವಲ್ಲದೆ ಜೀವನ ಚರಿತ್ರೆ, ಅನುವಾದ ಕೃತಿಗಳನ್ನು ರಚಿಸಿದ್ದಾರೆ. 'ಕೋಟೆಮನೆ' ಅವರ ಆತ್ಮಕಥೆ. ೧೯೯೮ರಲ್ಲಿ ಪ್ರಕಟವಾದ 'ರಾಸದರ್ಶನ' ಅವರ ಕುಟುಂಬ ವರ್ಗ ಮತ್ತು ಅಭಿಮಾನಿ ಮಿತ್ರು ಅರ್ಪಿಸಿದ ಅಭಿನಂದನಾಗ್ರಂಥ. ಸಮೇತನಹಳ್ಳಿಯವರು ತಮ್ಮ ನಾಟಕ, ಕಾದಂಬರಿಗಳಿಗಾಗಿ ಐತಿಹಾಸಿಕ ವಸ್ತುಗಳನ್ನೇ ಆಯ್ದುಕೊಂಡಿರುವುದೊಂದು ವಿಶೇಷ. 'ತಲಕಾಡುಗೊಂಡ', 'ಸಿರಿಯಲ ದೇವಿ'ಯಂಥ ಪ್ರಸಿದ್ಧ ನಾಟಕಗಳಾಗಲಿ 'ಸವತಿ ಗಂಧವಾರಣೆ', 'ಮೊನೆಗಾರ' ದಂಥ ಕಾದಂಬರಿಗಳಾಗಲಿ ಐತಿಹಾಸಿಕಗಳೇ. ಇದು ಅವರ ಸಂಶೋಧಕ ಪ್ರವೃತ್ತಿಯ ದ್ಯೋತಕ. ಮಹಾಕಾವ್ಯಕ್ಕೆ ಮಹಾಭಾರತದ ಆಖ್ಯಾನವೊಂದನ್ನು ಆಯ್ದುಕೊಂಡಿದ್ದಾರೆ. ಕಾವ್ಯದ ಛಂದೋಬದ್ಧತೆ, ಗದ್ಯದ ಬಿಗಿತನ ಇವುಗಳಿಂದಾಗಿ ಸಾಮಾನ್ಯ ಓದುಗನನ್ನು ಸೆಳೆದುಕೊಳ್ಳುವಲ್ಲಿ ರಾಮರಾಯರು ವಿಫಲರಾಗಿದ್ದಾರೆನಿಸಿದರೂ ಪಂಡಿತವಲಯದಲ್ಲಿ ಮಾನ್ಯತೆ ಪಡೆದಿದ್ದಾರೆ. ಪದವೀಧರನಲ್ಲದ ಈ ಲೇಖಕನ ಪುಸ್ತಕಗಳು ಪದವೀ ತರಗತಿಗಳ ಪಠ್ಯಗಳಾದವು. ವಿದ್ವಾಂಸರ ಅಭಿರುಚಿಗೆ ಸಾಮಗ್ರಿಗಳಾದವು. ಸಮೇತನಹಳ್ಳಿಯವರು ಎಲೆಮರೆಯಲ್ಲಿ ಕಾಯಾಗಿ ಉಳಿದರಾದರೂ, ಪಾಂಡಿತ್ಯ ಪ್ರತಿಭೆಗಳ ಸಂಗಮಗಳಾದ ಅವರ ಕೃತಿಗಳು ಸ್ವಾದುವಾದ ರಸಭರಿತ ಹಣ್ಣಗಳಾಗಿವೆ. ಇಂಥ ಅವರ ಹಲವು ಕೃತಿಗಳಿಗೆ ಸರಕಾರ, ಸಾಹಿತ್ಯ ಪರಿಷತ್ತು, ಪ್ರಸಿದ್ಧ ಪತ್ರಿಕೆಗಳು, ಪ್ರತಿಷ್ಠಾನಗಳು ಪ್ರಶಸ್ತಿ-ಬಹುಮಾನಗಳನ್ನು ನೀಡಿ ಗೌರವಿಸಿವೆ.

ಈಚೆಗೆ ನಿಧನರಾದ (೧೯೯೯) ರಾಮರಾಯರು ಎರಡು ಪೌರಾಣಿಕ ಕಾದಂಬರಿಗಳನ್ನು ಕೊಟ್ಟು ಹೋಗಿದ್ದಾರೆ. ಅವರ 'ಶ್ರೀ ಕೃಷ್ಣದರ್ಶನ' ಮತ್ತು 'ಶ್ರೀ ಪರಶುರಾಮ' ಎಂಬ ಎರಡು ಕೃತಿಗಳು ಗುಣ, ಗಾತ್ರ ಎರಡರಲ್ಲೂ ಹಿರಿದಾಗಿದ್ದು ಕನ್ನಡ ಪೌರಾಣಿಕ ಕಾದಂಬರಿ ಪರಂಪರೆಗೆ ಮುಖ್ಯ ಕಾಣಿಕೆಯಾಗಿವೆ.

**ಶಂಕರ ಮೊಕಾಶಿ ಪುಣೇಕರ**

ಕನ್ನಡ ನವ್ಯ ಸಂಪ್ರದಾಯದ ಪ್ರಸಿದ್ಧ ಕವಿಗಳೂ ವಿಮರ್ಶಕರೂ ಆದ ಶ್ರೀ ಶಂಕರ ಮೊಕಾಶಿ ಪುಣೇಕರ (೧೯೨೮) ಅವರು ೧೯೮೭ ರಲ್ಲಿ 'ಅವಧೇಶ್ವರಿ' ಎಂಬ ಕೃತಿ ಪ್ರಕಟಿಸುವ ಮೂಲಕ ಪೌರಾಣಿಕ ಕಾದಂಬರಿಕಾರರೆನಿಸಿಕೊಂಡರು. ಮರು ವರ್ಷವೇ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪಡೆದು ಆ ಕೃತಿ ಕನ್ನಡದ ಖ್ಯಾತಿ ಹೆಚ್ಚಿಸಿತು. ಪೌರಾಣಿಕ ಕಾದಂಬರಿ ಪರಂಪರೆಯಲ್ಲಿ ಮುಖ್ಯ ಕೃತಿಯಾಯಿತು.

ಧಾರವಾಡದಲ್ಲಿ ಹುಟ್ಟಿ ಬೆಳೆದ ಪುಣೇಕರ ಅಲ್ಲೇ ವಿದ್ಯಾಭ್ಯಾಸ ನಡೆಸಿದರು. ಇಂಗ್ಲಿಷ್ ನ ಯೇಟ್ಸ್ ಕವಿಯನ್ನು ಕುರಿತು ವಿಶೇಷ ಅಧ್ಯಯನ ಮಾಡಿ ಪಿಹೆಚ್.ಡಿ. ಪದವಿ ಪಡೆದರು. ಬಿಜಾಪುರ, ಬೆಳಗಾವಿ, ಧಾರವಾಡ, ಉಡುಪಿ, ಮುಂಬೈ, ಮೈಸೂರು, ಪುಟಪರ್ತಿ ಹೀಗೆ ಹಲವು ಕಡೆ ಶಿಕ್ಷಕರಾಗಿ ದುಡಿದರು.

ಏಕಕಾಲದಲ್ಲಿ ಆಧುನಿಕರೂ ಸಂಪ್ರದಾಯಸ್ಥರೂ ಆಗಿರುವ ವಿಕ್ಷಿಪ್ತ ವ್ಯಕ್ತಿತ್ವ ಮೊಕಾಶಿಯವರದು. ಒಮ್ಮೊಮ್ಮೆ ವಿಚಿತ್ರವಾಗಿ ವರ್ತಿಸಿ ಆಶ್ಚರ್ಯ ಹುಟ್ಟಿಸುವ ಅವರು ಸಜ್ಜನ ಪ್ರಾಜ್ಞ, ಪ್ರವಾಹದ ವಿರುದ್ಧ ಒಂಟಿಯಾಗಿ ಈಜುವುದರಲ್ಲೇ ಅವರಿಗೆ ಸಂತಸ. ನವ್ಯರಾಗಿಯೂ ನವೋದಯದವರ ಆದರ್ಶ, ಪಾಶ್ಚಾತ್ಯ ಸಂಸ್ಕೃತಿ, ಶಿಕ್ಷಣಗಳನ್ನು ಬಲ್ಲವರಾಗಿಯೂ ಭಾರತೀಯವಾದದ್ದರ ಆರಾಧನೆ ಅವರಿಗೆ ಪಥ್ಯ. ವೈಜ್ಞಾನಿಕ ಯುಗದ ಈ ಜ್ಞಾನಿಗೆ ಸಾಯಿಬಾಬ ಆರಾಧ್ಯ ದೈವ, ಇಂದಿರಾಗಾಂಧಿ ನಾಯಕಿ, ತುರ್ತುಪರಿಸ್ಥಿತಿಯೂ ಪ್ರಶಂಸನಾರ್ಹ. ಆಂತರ್ಯದಲ್ಲಿ ಅಂತಃಕರಣ ಮೃದು. ಎಲ್ಲರನ್ನೂ ಪ್ರೀತಿಸುವ, ಪೋಷಿಸುವ ಧಾರಾಳಿ ಅವರು. "ಗಂಧಕೊರಡು" ಅವರಿಗೆ ಅನ್ವರ್ಥನಾಮ. ಅದೇ ಹೆಸರಿನ ಗೌರವ ಗ್ರಂಥವೊಂದು ಈಚೆಗೆ ಕನ್ನಡ-ಇಂಗ್ಲಿಷ್ ಗಳಲ್ಲಿ ರಚಿತವಾಗಿ ಅವರಿಗೆ ಅರ್ಪಿತವಾಗಿದೆ.

ಅವರೊಬ್ಬ ಪ್ರಸಿದ್ಧ ಸಂಗೀತ ವಿಮರ್ಶಕರೂ ಆಗಿದ್ದಾರೆ. ಆಂಗ್ಲ ಮತ್ತಿತರ ಭಾಷೆಗಳಲ್ಲಿ ಪರಿಣತಿ ಪಡೆದಿದ್ದಾರೆ. ವಿದೇಶಿ ವಿಶ್ವವಿದ್ಯಾಲಯಗಳ ಆಹ್ವಾನದ ಮೇರೆಗೆ ಅನೇಕ ದೇಶಗಳಿಗೆ ಭೇಟಿ ನೀಡಿದ್ದಾರೆ. ಮೊಕಾಶಿಯವರು ಕನ್ನಡ, ಆಂಗ್ಲ ಎರಡೂ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ಇಂಗ್ಲಿಷ್ನಲ್ಲಿಯೇ ಹೆಚ್ಚು. ಭಾರತೀಯ ಇಂಗ್ಲಿಷ್ ಲೇಖಕರಲ್ಲಿ ಅವರು ಗಣ್ಯರಾಗಿದ್ದಾರೆ. ಅವರ ಕೃತಿಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಹೆಸರಿಸಬಹುದು. 'ಮಾಯಿಯ ಮೂರು ಮುಖಗಳು' (ಕವನಗಳು) 'ಗಂಗವ್ವ ಗಂಗಾಮಾಯಿ' (ವಾಸ್ತವವಾದಿ ಕಾದಂಬರಿ), 'ನಟನಾರಾಯಣಿ (ಪತ್ತೇದಾರಿ ಕಾದಂಬರಿ), 'ಡೆರೆಕ್ ಡಿಸೋಜ ಮತ್ತು ಇತರ ಕಥೆಗಳು' (ಸಣ್ಣಕತೆ), 'ಬೇಂದ್ರೆ ಕಾವ್ಯ ಮೀಮಾಂಸೆ' (ವಿಮರ್ಶೆ), 'ಸಾಹಿತ್ಯ ಮತ್ತು ಅಭಿರುಚಿ' (ವಿಮರ್ಶೆ), 'ಯುರೋಪಿಯನ್ ವಿಮರ್ಶೆಯ ಇತಿಹಾಸ,' The Captive (ಕವನಗಳು), The Pretender (ಕವನಗಳು), The latter poems of W.B.Yeasts (ವಿಮರ್ಶೆ), ಕುವೆಂಪು ಅವರ 'ರಾಮಾಯಣ ದರ್ಶನಮ್' ಅನ್ನು ಇಂಗ್ಲಿಷಿಗೆ ಅನುವಾದಿಸಿದ್ದು ಇನ್ನೂ ಪ್ರಕಟವಾಗಬೇಕಿದೆ. ಸಂಶೋಧಕ ಪ್ರವೃತ್ತಿಯ, ಪ್ರಯೋಗಶೀಲರಾದ ಶಂಕರ ಮೊಕಾಶಿಯವರ ಪ್ರವೇಶದಿಂದ ಕನ್ನಡ ಪೌರಾಣಿಕ ಕಾದಂಬರಿ ಕ್ಷೇತ್ರ ಶ್ರೀಮಂತವಾಯಿತೆನ್ನಬಹುದು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯೊಂದೇ ಅಲ್ಲದೆ ರಾಜ್ಯ ಸಾಹಿತ್ಯ ಅಕಾಡೆಮಿ, ಕುವೆಂಪು ವಿದ್ಯಾವರ್ಧಕ ಸಂಘ, ಮೈಸೂರು ವಿಶ್ವವಿದ್ಯಾನಿಲಯ ಮತ್ತಿತರ ಸಂಘ ಸಂಸ್ಥೆಗಳ ಗೌರವ ಅವರಿಗೆ ಸಂದಿದೆ. ತಮ್ಮ ಮೌಲಿಕ ಕೃತಿಗಳ ಕೊಡುಗೆಯಿಂದ ಕನ್ನಡ, ಇಂಗ್ಲಿಷ್ ಎರಡೂ ಭಾಷೆಯ ಓದುಗಳ ಹೃದಯದಲ್ಲಿ ಪುಣೇಕರ್ ಗಟ್ಟಿಸ್ಥಾನ ಹಿಡಿದಿದ್ದಾರೆ.

**ನಳಿನಿ ಮೂರ್ತಿ**

'ಊರ್ಮಿಳಾ' ಮತ್ತು 'ಪ್ರತಿಜ್ಞೆ' ಎಂಬ ಎರಡು ಒಳ್ಳೆಯ ಪೌರಾಣಿಕ ಕಾದಂಬರಿಗಳನ್ನು ಕನ್ನಡ ಸಾಹಿತ್ಯ ಪರಂಪರೆಗೆ ನೀಡಿರುವ ನಳಿನಿ ಮೂರ್ತಿಯವರು ಸುಸಂಸ್ಕೃತಿ ಮತ್ತು ಸುಶಿಕ್ಷಣದ ಹಿನ್ನೆಲೆಯನ್ನು ಹೊಂದಿರುವವರು. ಮೂಲತಃ ಅವರೊಬ್ಬ ವಿಜ್ಞಾನಿ. ಕಂಪ್ಯೂಟರ್ ವಿಜ್ಞಾನದಲ್ಲಿ ಪಿಹೆಚ್.ಡಿ. ಪಡೆದವರು. ಜಾಂಬಿಯಾ, ಎಡ್ಮಂಟನ್ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕಿಯಾಗಿ ದುಡಿದವರು. ಅತ್ಯಂತ ಪ್ರತಿಭಾವಂತೆಯಾಗಿ ಅಮೇರಿಕೆಯಂಥ ಅತ್ಯಾಧುನಿಕ ದೇಶದಲ್ಲಿ ನೆಲಸಿರುವ ಇವರ ಕನ್ನಡ ಪ್ರೇಮ ಉಲ್ಲೇಖನೀಯವಾಗಿದೆ. ತಾವು

ನೆಲೆಸಿದಲ್ಲಿ ಕನ್ನಡ ವಾತಾವರಣವನ್ನು ಸೃಷ್ಟಿಸಿಕೊಂಡಿರುವುದಲ್ಲದೆ ನಿರಂತರ ಕನ್ನಡ ಸಾಹಿತ್ಯ ಸೃಷ್ಟಿಯಲ್ಲಿಯೂ ತೊಡಗಿಕೊಂಡಿದ್ದಾರೆ. ಗಣಕಯಂತ್ರವನ್ನು ಕುರಿತು ಕೃತಿಗಳನ್ನು ರಚಿಸುವ ಮೂಲಕ ವಿಜ್ಞಾನ ಸಾಹಿತ್ಯ ಕ್ಷೇತ್ರಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. ತಮ್ಮ ಅತ್ತೆಯವರೂ ಕನ್ನಡದ ಹಿರಿಯ ಲೇಖಕಿಯೂ ಆದ ಹೆಚ್.ವಿ. ಸಾವಿತ್ರಮ್ಮನವರ ಪ್ರಭಾವ ನಳಿನಿಯವರನ್ನು ಪೌರಾಣಿಕ ಕಾದಂಬರಿ ರಚಿಸುವಂತೆ ಪ್ರೇರೇಪಿಸಿತು. ಈ ಕ್ಷೇತ್ರಕ್ಕೆ ಅವರ ಕೊಡುಗೆ ಸಣ್ಣದಲ್ಲ. ಬಿಸಿಲು, ಮಳೆ, ಬೀಸಿಬಂದ ಬಿರುಗಾಳಿ, ಬಂಗಾರದ ಜಿಂಕೆ, ಗಣಕದ ಕತೆ, ಗಣಕ ಎಂದರೇನು? ಇವು ನಳಿನಿ ಮೂರ್ತಿಯವರ ಪ್ರಕಟಿತ ಕೃತಿಗಳಾಗಿವೆ.

**ಎ. ಪಂಕಜ**

ಆಧುನಿ ಕನ್ನಡ ಸಾಹಿತ್ಯದ ಜನಪ್ರಿಯ ಲೇಖಕಿಯರಲ್ಲಿ ಎ. ಪಂಕಜ ಒಬ್ಬರು. ಪಾವಗಡದಲ್ಲಿ ಹುಟ್ಟಿ, ಬೆಳೆದು, ಬೆಂಗಳೂರಿನ ಮಲ್ಲೇಶ್ವರದ ನಿವಾಸಿಯಾಗಿರುವ ಪಂಕಜ ಅವರು ಪ್ರೌಢಶಾಲೆಯ ಅಧ್ಯಾಪಕಿಯಾಗಿದ್ದರು. ಮನೆ ಮಾತು ತಮಿಳು, ಹಿಂದಿಯಲ್ಲಿ ಪರಿಣತಿ ಹೊಂದಿದ್ದಾರೆ. ಸಮಾಜ ಸೇವೆಯ ಕೈಂಕರ್ಯವನ್ನೂ ಚಿಕ್ಕಂದಿನಿಂದ ನಡೆಸಿಕೊಂಡು ಬಂದ ಪಂಕಜ ಅವರು ಹಲವು ಸಂಘ-ಸಂಸ್ಥೆಗಳಲ್ಲಿ ಸಕ್ರಿಯ ಸದಸ್ಯೆಯಾಗಿದ್ದರು. ಇನ್ನು ಹಲವು ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಕರ್ನಾಟಕದಲ್ಲೇ ಮೊದಲಾಗಿ ಮಹಿಳಾ ಸಹಕಾರ ಸಂಘವನ್ನು ಸ್ಥಾಪಿಸಿದವರೆಂಬ ಹಿರಿಮೆ ಅವರಿಗೆ ಸಲ್ಲುತ್ತದೆ. ಎಪ್ಪತ್ತರ ಇಳಿಹರೆಯದಲ್ಲಿ ಈಗಲೂ ಆದರ್ಶ ಭಾರತೀಯ ಸಾಂಸ್ಕೃತಿಕ ಸಂಸತ್ ನ ಸಾಹಿತ್ಯ ಕೇಂದ್ರದ ನಿರ್ದೇಶಕರಾಗಿ ಅವರು ಕ್ರಿಯಾಶೀಲರೇ ಆಗಿದ್ದಾರೆ. ಎಳೆ ಹರೆಯದಲ್ಲಿ ಪ್ರೀತಿಸಿ ಅಂತರ್ಜಾತಿ ವಿವಾಹವಾಗಿ ಸಮಾಜಕ್ಕೆ ಬಿಸಿ ಮುಟ್ಟಿಸಿದ ಧೈರ್ಯವಂತೆ.

ಬರವಣಿಗೆಯ ಹವ್ಯಾಸ ಪಂಕಜ ಅವರಿಗೆ ಚಿಕ್ಕಂದಿನಿಂದಲೇ ಅಂಟಿಕೊಂಡಿದ್ದು, ಮದುವೆಯಾದ ಮೊದಲಲ್ಲಿ ಸಾಹಿತ್ಯ ರಚನೆಗೆ ಅಂಥ ಪ್ರೋತ್ಸಾಹ ದೊರೆಯದಿದ್ದರೂ ಬರವಣಿಗೆ ಕೈಬಿಡದೆ ನಂತರದ ವರ್ಷಗಳಲ್ಲಿ ಕುಟುಂಬದ ಇತರ ಸದಸ್ಯರ ಪ್ರೋತ್ಸಾಹ ಪಡೆಯುವಲ್ಲಿ ಯಶಸ್ವಿಯಾದರು. ಕಥಾ ಸಾಹಿತ್ಯದಲ್ಲೇ, ಕಥೆ, ಕಾದಂಬರಿ-ಸಾಮಾಜಿಕ, ಪೌರಾಣಿಕ, ಪತ್ತೇದಾರಿ- ಹೀಗೆ ಭಿನ್ನ ಬಗೆಯವನ್ನು ರಚಿಸಿದ್ದಾರೆ. ಇವಲ್ಲದೆ ವಿಚಾರ ಸಾಹಿತ್ಯ, ಚರಿತ್ರೆ, ಸ್ತೋತ್ರ ಮುಂತಾಗಿ ಇತರ ಸಾಹಿತ್ಯ ಸ್ವರೂಪಗಳಲ್ಲೂ ಪಂಕಜ ಕೃಷಿ ನಡೆಸಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿರುವ ಅವರ ಸಾಮಾಜಿಕ ಕಾದಂಬರಿಗಳಲ್ಲಿ 'ಸೊಗಸುಗಾತಿ' ಮತ್ತು 'ಕಾಗದದ ದೋಣಿ' ಎಂಬೆರಡು ಕೇಂದ್ರ ಸರ್ಕಾರದಿಂದ ಪರಸ್ಕೃತವಾಗಿವೆ. (೧೯೭೧) 'ಜೀವನ ಜಾಲ', 'ರಾಗಸುಧಾ', 'ಬಂಗಾರದ ಬಲೆ', 'ಬಯಕೆಯ ಬೆಂಕಿ', 'ಸ್ನೇಹ ಸಂಬಂಧ' ಮುಂತಾದವು ಅವರ ಇತರ ಜನಪ್ರಿಯ ಕೃತಿಗಳು.

ಈಚೆಗೆ ವಯೋಧರ್ಮವನ್ನು ಅನುಸರಿಸಿ ಪಂಕಜರವರು ಅಧ್ಯಾತ್ಮದತ್ತ ತಿರುಗಿದರು. ಕೆ.ಎಸ್. ನಾರಾಯಣಾಚಾರ್ಯರ ಸಲಹೆಯಂತೆ ಪೌರಾಣಿಕ ವಸ್ತುಗಳನ್ನಾಯ್ದುಕೊಂಡು ಕಾದಂಬರಿ ಬರೆಯತೊಡಗಿದರು. ೧೯೮೯ರಲ್ಲಿ ಪ್ರಕಟವಾದ 'ತೇಜತ್ರೇಯರು'ವಿನಿಂದ ತೊಡಗಿ 'ಬ್ರಹ್ಮರ್ಷಿ ವಿಶ್ವಾಮಿತ್ರ', 'ಫಲ್ಗುಣಸಖ', 'ಪುರುಷೋತ್ತಮ' ಎಂಬ ನಾಲ್ಕು ಪೌರಾಣಿಕ ಕಾದಂಬರಿಗಳು ಇಲ್ಲಿಯವರೆಗೆ ಪಂಕಜರವರ ಲೇಖನಿಯಿಂದ ಮೂಡಿ ಬಂದಿವೆ.

**ಆದ್ಯ ರಾಮಾಚಾರ್ಯ**

ಕನ್ನಡದಲ್ಲಿ ಪೌರಾಣಿಕ ಕಾದಂಬರಿಗಳನ್ನು ಧಾರ್ಮಿಕ ಶ್ರದ್ಧೆಯಿಂದ ಮತ್ತು ಧರ್ಮ ಪುನರ್ ಪ್ರತಿಷ್ಠಾಪನೆಯ ಉದ್ದೇಶದಿಂದ ಬರೆದ ಹಿರಿಯ ಲೇಖಕರು ಆದ್ಯ ರಾಮಾಚಾರ್ಯರು. ಆಸ್ತಿಕರ ವಲಯದಲ್ಲಿ ಅವರು ಅತ್ಯಂತ ಪ್ರಸಿದ್ಧರೂ ಮತ್ತು ಜನಪ್ರಿಯರೂ ಆಗಿದ್ದಾರೆ. ಹುಟ್ಟಿದ್ದು ಉತ್ತರ ಕರ್ನಾಟಕದ ಬಿಜಾಪುರ ಜಿಲ್ಲೆಯಲ್ಲಾದರೂ (೨೬, ನವೆಂಬರ್ ೧೯೨೬) ನೆಲಿಸಿದ್ದು ಬೆಂಬಳೂರಿನಲ್ಲಿ. ತಂದೆ ಆದ್ಯ ಸೇತೂ ರಾಮಾಚಾರ್ಯರು ಪ್ರಸಿದ್ಧ ಪುರಾಣ ಪ್ರವಚನಕಾರರು. ಸಂಪ್ರದಾಯಸ್ಥ ಕುಟುಂಬ. ಮದ್ವ ಮತಾನುಯಾಯಿಗಳಾದ ಆದ್ಯರಿಗೆ ಮನೆಯಲ್ಲಿ

ಸಂಸ್ಕೃತ ಕಾವ್ಯ ವ್ಯಾಕರಣಗಳ ಅಭ್ಯಾಸ, ಮಠಗಳಲ್ಲಿ ಧರ್ಮಶಾಸ್ತ್ರಾದಿಗಳ ಅಧ್ಯಯನವಾಯಿತು. ಆಧುನಿಕ ಶಿಕ್ಷಣ ಬಿಜಾಪುರದ ದರ್ಬಾರ್ ಹೈಸ್ಕೂಲು ಮಟ್ಟಕ್ಕೇ ಮುಗಿದು ಹೋಯಿತು. ವೇದವೇದಾಂತಗಳೇ ಮೊದಲಾದ ಧಾರ್ಮಿಕ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿರುವ ಆದ್ಯರು ಮರಾಠಿ, ಹಿಂದಿ, ಇಂಗ್ಲಿಷ್, ಸಂಸ್ಕೃತ ಹೀಗೆ ಹಲವು ಭಾಷೆಗಳನ್ನು ಬಲ್ಲರು.

ರಾಮಾಚಾರ್ಯರು ಸುಮಾರು ನಲ್ವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವುಗಳಲ್ಲಿ ಹಿಂದೂ ಧರ್ಮದ ಪವಿತ್ರ ಯಾತ್ರಾಸ್ಥಳಗಳ, ಪೂಜನೀಯ ವಸ್ತುಗಳ, ವ್ಯಕ್ತಿಗಳ, ಸಂಪ್ರದಾಯ-ಆಚರಣೆಗಳ ಪರಿಚಯಾತ್ಮಕ ಕೃತಿಗಳು, ಸಂಶೋಧನಾತ್ಮಕ ಕೃತಿಗಳು, ಸೃಜನಾತ್ಮಕವಾದ ಐತಿಹಾಸಿಕ, ಪೌರಾಣಿಕ ಕಾದಂಬರಿಗಳು, ಒಂದು ಪತ್ತೇದಾರಿ ಕಾದಂಬರಿಯೂ ಸೇರಿವೆ. ಹಲವು ಅನುವಾದಿತ ಗ್ರಂಥಗಳು, ಮಕ್ಕಳಿಗಾಗಿ ಬರೆದವು-ಹೀಗೆ ಹಲವು ಬಗೆಯವಿದೆ. ಅವರ ಕೃತಿಗಳು ಹಿಂದಿ, ತೆಲಗು, ಮಲೆಯಾಳಂ ಮತ್ತು ಇಂಗ್ಲಿಷ್ ಭಾಷೆಗೆ ಅನುವಾದಗೊಂಡಿವೆ. ದೊಡ್ಡ ಗಾತ್ರದ ವಿಸ್ತೃತ ಪ್ರಸಾರವನ್ನು ಪಡೆದಿರುವ ಸಾಹಿತ್ಯ ಸಂಪತ್ತು ಅವರದು.

ಹಲವು ಬಗೆಯ ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಆದ್ಯರು ತಮ್ಮನ್ನು ತೊಡಗಿಸಿಕೊಂಡವರು. ಭಾರತ ಸ್ವಾತಂತ್ರ್ಯ ಸಂಗ್ರಾಮ, ಕರ್ನಾಟಕ ರಾಜ್ಯ ನಿರ್ಮಾಣ, ಗಡಿ ಸಮಸ್ಯೆ ಇಂಥ ಚಳುವಳಿಗಳಲ್ಲಿ ಸಕ್ರಿಯ ಭಾಗಿಗಳಾಗಿದ್ದದ್ದಲ್ಲದೆ ಭಾರತೀಯ ಸೇವಾದಳ, ಅಖಿಲಭಾರತ ಕಾಂಗ್ರೆಸ್ ಸಮಿತಿ ಇವುಗಳಲ್ಲಿ ದುಡಿದಿದ್ದಾರೆ. ಹಲವಾರು ದೇವಾಲಯ ಸಮಿತಿಗಳು, ದತ್ತಿ ಸಂಸ್ಥೆಗಳಲ್ಲಿ ಸದಸ್ಯರಾಗಿದ್ದರು. ದಾಸ ಸಾಹಿತ್ಯ ಸಂಸ್ಥೆಗಳ, ಮಾಧ್ವಮತೀಯ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿದ್ದರು. ಉತ್ತರ ಭಾರತದ ಹಿಮಾಲಯದವರೆಗೆ ಪೌರಾಣಿಕ ಐತಿಹಾಸಿಕ ಸ್ಥಳಗಳನ್ನು ಸಂದರ್ಶಿಸಿದ್ದಾರೆ. ಇವರ ಧಾರ್ಮಿಕ ಮತ್ತು ಸಾಹಿತ್ಯಿಕ ಸೇವೆಯನ್ನು ಗೌರವಿಸಿ ಅನೇಕ ಪ್ರಶಸ್ತಿಗಳೂ ಬಿರುದಾವಳಿಗಳೂ ಅವರಿಗೆ ಸಂದಿವೆ. ಸಾಹಿತ್ಯ ಚಿಂತಾಮಣಿ, ಕನ್ನಡ ಕುಲಭೂಷಣ, ದಾಸಸಾಹಿತ್ಯ ಪ್ರದೀಪ, ದಾಸವಾಙ್ಮಯ ಭೂಷಣ, ಗುರುಸೇವಾ ಧುರೀಣ ಇವು ಅವುಗಳಲ್ಲಿ ಮುಖ್ಯವಾದವು.

ಅವರ ಪೌರಾಣಿಕವೆನಿಸಿಕೊಳ್ಳುವ ಕೃತಿಗಳನ್ನು ಗಮನಿಸಿದಾಗ ಅವುಗಳಲ್ಲಿ ಎಲ್ಲವೂ ಕಾದಂಬರಿಗಳೆನಿಸಿಕೊಳ್ಳುವ ಲಕ್ಷಣಗಳನ್ನು ಹೊಂದಿಲ್ಲ. ಉದಾ : 'ಪ್ರಸನ್ನ ವೆಂಕಟದಾಸರು', 'ಧನಂಜಯ' ಜೀವನ ಚರಿತ್ರೆಗಳಾಗಿವೆ. ಧನಂಜಯವೆಂಬ ಹೆಸರಿನಡಿ ಅರ್ಜುನನ ಕಥೆಯನ್ನು ಲೌಕಿಕ ವ್ಯಕ್ತಿಯ ಜೀವನದೊಂದಿಗೆ ಬೆಸೆದು, ಜನ್ಮಾಂತರವೆಂಬಂತೆ ವರ್ಣಿಸಿರುವುದರಿಂದ ಇದನ್ನು ಕಾದಂಬರಿ ಎಂದು ಭ್ರಮಿಸುವಂತಾಗಿದೆ. ಲೇಖಕರೇ ಇದನ್ನು ಜೀವನ ಪ್ರವಾಹ ಎಂದು ಕರೆದಿದ್ದಾರೆ. 'ರಾಧೇಯ' ಕರ್ಣನನ್ನು ಕುರಿತ ಕಾದಂಬರಿಯೇ ಆದರೂ ಅದು ಮರಾಠಿ ಮೂಲದ ಅನುವಾದ. ಅನುವಾದ ಕೃತಿಯೆಂದೇ ಅದಕ್ಕೆ ಸಾಹಿತ್ಯ ಅಕಾಡೆಮಿಯ ಬಹುಮಾನ ಬಂದದ್ದು (೧೯೮೦) ಕೂಡ. ಅದು ಆದ್ಯರ ಸ್ವತಂತ್ರ ಕೃತಿ ಎಂಬಂತೆ ಪ್ರಚಾರ ಪಡೆದುಕೊಂಡಿದೆ. ಕೆಲವು ತಿರುಪತಿ, ದ್ವಾರಕಾ ಇತ್ಯಾದಿ ಸ್ಥಳ ಪುರಾಣಗಳೂ ಹೀಗೇ ತಪ್ಪಾಗಿ ಕಲ್ಪಿಸಲ್ಪಟ್ಟವೆ. ನಿಜಕ್ಕೂ ಪೌರಾಣಿಕ ಕಾದಂಬರಿಗಳಾಗಿ ಅವರ ಆಚಾರ್ಯ ದ್ರೋಣ, ರಾಜಾ ವೃಕೋದರ ಮತ್ತು ಪಾಂಚಾಲಿ ಎಂಬ ಮೂರು ಕೃತಿಗಳು ಮಾತ್ರ ಒಪ್ಪಿತವಾಗುತ್ತವೆ.

**ಭೀಮಸೇನ ತೋರಗಲ್ಲ**

ಕನ್ನಡಕ್ಕೊಂದು ವಿಶಿಷ್ಟ ಪೌರಾಣಿಕ ಕಾದಂಬರಿಯನ್ನು ನೀಡಿ ಖ್ಯಾತರಾದ ಭೀಮಸೇನ ತೊರಗಲ್ಲ ಅವರು ಬೆಳಗಾವಿಯವರು. ಮರಾಠಿ ಪ್ರಭಾವಕ್ಕೊಳಗಾಗಿರುವ ಬೆಳಗಾವಿಯಲ್ಲಿ ವಿವಿಧ ಬಗೆಯಲ್ಲಿ ಕನ್ನಡ ಕೈಂಕರ್ಯ ಕೈಗೊಂಡು ಕನ್ನಡ ಕಹಳೆ ಮೊಳಗಿಸುತ್ತಿರುವವರು. ಮೂಲತಃ ಭೀಮಸೇನರು ಪತ್ರಿಕೋದ್ಯಮಿ. ಬೆಳಗಾವಿಯಲ್ಲಿ 'ಪ್ರಚಲಿತ' ಮತ್ತು 'ಸಮತೋಲ' ಎಂಬ ಪತ್ರಿಕೆಗಳನ್ನು ಆರಂಭಿಸಿ, ಸಂಪಾದಿಸಿ ಯಶಸ್ವಿಯಾಗಿ ನಡೆಸಿದವರು. ಕನ್ನಡ ಸಾಹಿತ್ಯಿಕ ಚಟುವಟಿಕೆಗಳನ್ನು ನಿರಂತರ ನಡೆಸುತ್ತಾ ಯುವ ಬರೆಹಗಾರರನ್ನು ಪ್ರೋತ್ಸಾಹಿಸುತ್ತಾ ಪ್ರೇರಕ ಶಕ್ತಿಯಾಗಿರುವವರು. ವಿಜ್ಞಾನ ಪದವೀಧರರಾಗಿ ಗಣಿತದಲ್ಲೂ ಚಾಣಾಕ್ಷರಾದ ತೊರಗಲ್ಲರು ಕಂಪ್ಯೂಟರ್ ಯಂತ್ರದ ಸಹಾಯದೊಂದಿಗೆ ಕನ್ನಡ ಪತ್ರಿಕೆಯನ್ನು ಮುದ್ರಿಸಿದ ಮೊದಲಿಗರು. ಬೆಳಗಾವಿಯಲ್ಲಿ ಮೊಳಕೆಯೊಡೆದ ಈ ಕಂಪ್ಯೂಟರ್ ಕ್ರಾಂತಿ

ನಾಡಿನಾದ್ಯಂತ ಹಬ್ಬಿಕೊಂಡು ಪತ್ರಿಕಾ ಕ್ಷೇತ್ರದ ಪ್ರಗತಿಗೆ ಕಾರಣವಾಯಿತು. ಬಹುದೊಡ್ಡ ಮಿತ್ರ ಬಳಗ, ಸುಖೀ ಸಂಸಾರದೊಂದಿಗೆ ೬೨ರ ಹರೆಯದಲ್ಲಿರುವ ತೊರಗಲ್ಲರು ಬೆಳಗಾವಿ ಸಾಂಸ್ಕೃತಿಕ ರಂಗದ ಬಹುಮುಖ್ಯ ಆಸ್ತಿಯಾಗಿದ್ದಾರೆ. ಈಚೆಗೆ ಅವರ ಅಭಿಮಾನಿಗಳು ಅವರಿಗೆ ನೀಡಿದ ಅಭಿನಂದನೆ, ಪ್ರಕಟಿಸಿದ ಅಭಿನಂದನ ಗ್ರಂಥ 'ಭೀಮಪರ್ವ' ಅವರು ಗಳಿಸಿದ ಜನ ಪ್ರೀತಿಗೆ ದ್ಯೋತಕವಾಗಿದೆ. ಅಮೋಘ ವಾಙ್ಮಯ ಎಂಬ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿ ತನ್ಮೂಲಕ ಹಲವಾರು ಮೌಲಿಕ ಕೃತಿಗಳನ್ನು ಪ್ರಕಟಿಸುತ್ತಿದ್ದಾರೆ.

ಭೀಮಸೇನರು ಬರೆದ ಸೃಜನಾತ್ಮಕ ಕೃತಿಗಳು ಮೂರೇ. ಪ್ರಖರ ವಿಚಾರಪರರಾದ ಅವರ ಧೋರಣೆಗಳು ಈ ಕೃತಿಗಳ ಮುಖೇನ ಮೂರ್ತ ರೂಪ ಪಡೆದಿವೆ. 'ಸಂಚು' ಅವರ ಸುಪ್ರಸಿದ್ಧ ಪೌರಾಣಿಕ (ತಾರ್ಕಿಕ) ಕಾದಂಬರಿ. ಇದು ಕೇಂದ್ರ ಸಾಹಿತ್ಯ ಅಕಾಡೆಮಿಯ ಮನ್ನಣೆಯನ್ನು ಪಡೆದು ದೇಶದ ಹದಿನಾಲ್ಕು ಭಾಷೆಗಳಿಗೆ ಅನುವಾದಗೊಳ್ಳುತ್ತಿದೆಯಲ್ಲದೆ ೧೯೯೩ರಲ್ಲಿ ಪ್ರಕಟವಾದ ಇದು ಆಗಲೇ ಮೂರನೇ ಮುದ್ರಣ ಕಂಡಿದೆ. 'ಸತ್ಯನಾರಾಯಣ ಸತ್ತ', 'ಅಪರಿಚಿತರು' ಎಂಬೆರಡು ನಾಟಕಗಳನ್ನು ತೊರಗಲ್ಲರು ರಚಿಸಿದ್ದಾರೆ. ಇವುಗಳಲ್ಲಿ ಮೊದಲನೆಯದು ಸತ್ಯನಾರಾಯಣನನ್ನು ಕುರಿತ ಜನರ ಮೌಢ್ಯದ ವಿಡಂಬನೆಯಾಗಿದ್ದು ರಂಗದ ಮೇಲೂ ಯಶಸ್ವಿಯಾಗಿದೆ. ತೊರಗಲ್ಲರಿಂದ ಇನ್ನೂ ಹೆಚ್ಚಿನದನ್ನು ನಿರೀಕ್ಷಿಸಬಹುದಾಗಿದೆ.

**ಕೆ.ಎಸ್. ನಾರಾಯಣಾಚಾರ್ಯ**

ಸದ್ಯಕ್ಕೆ ಕನ್ನಡ ಧರ್ಮಾಭಿಮಾನಿ. ಆಸ್ತಿಕ ಓದುಗ ಸಮುದಾಯದಲ್ಲಿ ಅತಿ ಆದರ ಗೌರವ ಪ್ರೀತಿಗಳಿಗೆ ಪಾತ್ರವಾಗಿರುವ ವ್ಯಕ್ತಿ ನಾರಾಯಣಾಚಾರ್ಯರು. ಮೂಲತಃ ದಕ್ಷಿಣ ಕನ್ನಡದವರಾದ ಆಚಾರ್ಯರು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಆಂಗ್ಲಭಾಷೆ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದವರು. ಕರ್ಮಠ ಮನೆತನದ ಕೊಡುಗೆಯಾದ ಸಂಸ್ಕೃತ ಕಲಿಸಲಿಕ್ಕಾಗಿ ಕಲಿತ ಇಂಗ್ಲಿಷ್, ಆಡುನುಡಿ ತುಳು, ನಾಡುನುಡಿ ಕನ್ನಡ, ಸೋದರ ಭಾಷೆ ತಮಿಳು ಹೀಗೆ ಹಲವು ಭಾಷೆಗಳಲ್ಲಿ ಪ್ರೌಢಿಮೆ ಪಡೆದಿರುವವರು. ವೇದೋಪನಿಷತ್ತುಗಳು, ತತ್ವಶಾಸ್ತ್ರ ಪುರಾಣಗಳು ಮುಂತಾದ ಆರ್ಷೇಯ ಗ್ರಂಥಗಳನ್ನು ಆಮೂಲಾಗ್ರ ಅಭ್ಯಸಿಸಿ ಸಮರ್ಥವಾಗಿ ವ್ಯಾಖ್ಯಾನಿಸುವ ಅವರ ಅಧ್ಯಾತ್ಮ ಜ್ಞಾನ ಅಪಾರವಾದದ್ದು. ಸೇವೆಯಿಂದ ನಿವೃತ್ತರಾದ ನಂತರ ಕೆಲವು ಕಾಲ ಬೆಂಗಳೂರಿನಲ್ಲಿದ್ದು ಪ್ರಸ್ತುತ ಧಾರವಾಡದಲ್ಲಿ ನೆಲೆನಿಂತಿದ್ದಾರೆ.

ಸಂಖ್ಯೆಯಲ್ಲಿ ಅರ್ಧ ಶತಕವನ್ನೂ ಮೀರಿ ಅವರು ಕೃತಿರಚನೆ ಮಾಡಿ ಕನ್ನಡ, ಇಂಗ್ಲಿಷ್ ಸಾರಸ್ವತ ಲೋಕದಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ಈ ಎಲ್ಲವೂ ಧಾರ್ಮಿಕ ಗ್ರಂಥಗಳೇ ಆಗಿವೆ. ವೇದಗಳು, ಭಗವದ್ ಗೀತೆ, ಭಾಗವತ, ವಿಶಿಷ್ಟಾದ್ವೈತದ ರಾಮಾನುಜರು, ರಾಮಾಯಣದ ರಾಮ, ಮಹಾಭಾರತದ ಕೃಷ್ಣ, ಇತರ ಪಾತ್ರಗಳ ಪರಿಚಯ, ಆಳ್ವಾರರು ಹರಿದಾಸರು, ವ್ಯಾಸರು- ಹೀಗೆ ಪುರಾಣ ಮತ್ತು ಅಧ್ಯಾತ್ಮ ಜಗತ್ತಿನ ಬಹುತೇಕ ವ್ಯಕ್ತಿಗಳ ತತ್ವಗಳ ಬಗೆಗೆ ಕೃತಿಗಳನ್ನು ರಚಿಸಿದ್ದಾರೆ. ಬೇಂದ್ರೆಯವರ ಕಾವ್ಯದಲ್ಲಿನ ಅಧ್ಯಾತ್ಮದ ನೆಲೆಯನ್ನು ಕಾವ್ಯ ಪ್ರಿಯರಿಗೆ ತೋರಿದ್ದಾರೆ. ಒಟ್ಟಿನಲ್ಲಿ ಈ ಅಧ್ಯಾತ್ಮಿಕ ಸಾಹಿತ್ಯದ ಅವರ ಪ್ರಗಲ್ಬತೆ ಮತ್ತು ಅದನ್ನು ಪ್ರಚುರಪಡಿಸುವ ಶ್ರದ್ಧೆ, ಶ್ರಮ, ಆಸಕ್ತಿ, ಉತ್ಸಾಹಗಳು ಬೆರಗುಗೊಳಿಸುವಂಥವು. ರಾಮ, ಕೃಷ್ಣರನ್ನು ಕುರಿತು ಅವರು ಬರೆದ ಕೃತಿಗಳನ್ನೂ, ಕೌಟಿಲ್ಯ, ಅಗಸ್ತ್ಯರನ್ನು ಕುರಿತ ಪುಸ್ತಕಗಳನ್ನೂ ಕಾದಂಬರಿಗಳೆಂದು ಕರೆಯಲಾಗಿದೆ. ಆಚಾರ್ಯರಿಂದ ಪ್ರೇರಿತರಾಗಿ ಪ್ರಭಾವಿತರಾಗಿ ಕೆಲವರು ಈ ಕಾದಂಬರಿ ಕ್ಷೇತ್ರಕ್ಕೆ ಕಾಲಿಟ್ಟರೆಂಬುದು ಮುಖ್ಯವಾದ ಅಂಶವಾಗಿದೆ.

**ಎಸ್.ವಿ. ಪ್ರಭಾವತಿ**

ಈಚಿನ ವರ್ಷಗಳಲ್ಲಿ ಅಂದರೆ ಇಪ್ಪತ್ತನೇ ಶತಮಾನದ ಕೊನೆಯ ದಶಕದ ಉತ್ತರಾರ್ಧದಲ್ಲಿ ಪೌರಾಣಿಕ ಕಾದಂಬರೀ ಕ್ಷೇತ್ರದಲ್ಲಿ ಆಸ್ಥೆ ತಾಳಿ ಕೆಲವು ಮೌಲಿಕ ಕೃತಿಗಳನ್ನು ನೀಡಿರುವ ಲೇಖಕಿ ಎಸ್.ವಿ. ಪ್ರಭಾವತಿಯವರು. ಸ್ತ್ರೀವಾದಿ ನಿಲುವಿನಿಂದ ಪೌರಾಣಿಕ ಪಾತ್ರಗಳನ್ನು ಪುನರ್ರಚಿಸಿದವರಲ್ಲಿ ಹೆಚ್.ವಿ. ಸಾವಿತ್ರಮ್ಮ, ನಳಿನಿ ಮೂರ್ತಿಯವರ ನಂತರ ಪ್ರಭಾವತಿಯವರೇ ಪ್ರಮುಖರೆಂದು ಪರಿಗಣಿಸಬೇಕಾಗುತ್ತದೆ.

ಬೆಂಗಳೂರಿನ ಭಾರತೀಯ ಸಂಸ್ಕೃತಿ ವಿದ್ಯಾಪೀಠ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕಿಯಾಗಿರುವ ಪ್ರಭಾವತಿಯವರು ಪುರಾಣ ಪಾತ್ರವಾದ ದ್ರೌಪದಿಯ ಕುರಿತು ವಿಶೇಷ ಅಧ್ಯಯನ ನಡೆಸಿ "ಕನ್ನಡ ಸಾಹಿತ್ಯದಲ್ಲಿ ದ್ರೌಪದಿ" ಎಂಬ ಸಂಶೋಧನ ಪ್ರಬಂಧ ರಚಿಸಿದ್ದಾರೆ. ಈ ಅಧ್ಯಯನದ ತಳಹದಿಯ ಮೇಲೆ ಅವರ ಮೊದಲ ಪೌರಾಣಿಕ ಕಾದಂಬರಿ 'ದ್ರೌಪದಿ' ರಚನೆಯಾಗಿದೆ. ಎರಡನೇ ಕೃತಿ ಅದೇ ಮಹಾಭಾರತದ ಕುಂತಿಯ ಕಥಾನಕವನ್ನೊಳಗೊಂಡ ಅದೇ ಹೆಸರಿನ ಕಾದಂಬರಿ. 'ಅಹಲ್ಯೆ' ಅವರ ಮೂರನೆಯ ಕಾದಂಬರಿ. ಇವಲ್ಲದೆ 'ಮಳೆನಿಂತ ಮೇಲಿನ ಮರ' ಎಂಬ ಕವನ ಸಂಕಲನವೊಂದನ್ನು ಪ್ರಭಾವತಿಯವರು ಪ್ರಕಟಿಸಿ ತಮ್ಮ ಕವಿತಾ ರಚನಾ ಸಾಮರ್ಥ್ಯವನ್ನು ತೋರಿಸಿದ್ದಾರೆ. 'ದ್ರೌಪದಿ-ಒಂದು ಅಧ್ಯಯನ' ಇವರ ಇನ್ನೊಂದು ವಿದ್ವತ್ಪೂರ್ಣ ಕೃತಿ.

ತಮ್ಮ ದ್ರೌಪದಿ ಕಾದಂಬರಿಗಾಗಿ ಕರ್ನಾಟಕ ಲೇಖಕಿಯರ ಪರಿಷತ್ತಿನ ಪ್ರಶಸ್ತಿಯನ್ನು ಪಡೆದಿರುವ ಪ್ರಭಾವತಿಯವರು ಭರವಸೆ ಮೂಡಿಸಿರುವ ಹೊಸ ಪೀಳಿಗೆಯ ಬರಹಗಾರ್ತಿಯಾಗಿದ್ದಾರೆ. ಅಲ್ಲದೆ ಬರಿಯ ಪೌರಾಣಿಕ ಕಾದಂಬರಿಗಳನ್ನೆ ಬರೆದಿರುವ ಮೊದಲ ಸೃಜನಾತ್ಮಕ ಲೇಖಕಿಯಾಗಿದ್ದಾರೆ.

**ಇತರರು**

ಮಲೆನಾಡು ಪ್ರದೇಶದ ಜನಪ್ರಿಯ ಬರಹಗಾರರಲ್ಲಿ ಶ್ರೀ ಶ್ರೀನಿವಾಸ ಉಡುಪರು ಒಬ್ಬರು. ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನವರಾದ ಉಡುಪರು ಹುಟ್ಟಿದ್ದು ೧೯೩೩ರಲ್ಲಿ. ಹುಟ್ಟು ಹೆಸರು ಕೃಷ್ಣ. ಮಗುವನ್ನು ಜೀವಾಪಹಾರಿ ಜ್ವರದಿಂದ ತಿರುಪತಿ ತಿಮ್ಮಪ್ಪನ ಹರಕೆ ಉಳಿಸಿತು ಎಂಬ ತಂದೆತಾಯಿಗಳ ನಂಬುಗೆ ಉಡುಪರನ್ನು ಶ್ರೀನಿವಾಸ ಎಂದು ಕರೆಯುವಂತೆ ಮಾಡಿತು. ಅದೇ ಖಾಯಿಲೆ ಉಡುಪರ ಕಾಲೊಂದನ್ನು ಬಲಹೀನಗೊಳಿಸಿ ಜೀವಮಾನವೆಲ್ಲ ಕೋಲೂರಿ ನಡೆಯುವಂತೆಯೂ ಮಾಡಿತು.

ಕೃಷಿ ಕುಟುಂಬದಿಂದ ಬಂದಿದ್ದ ಉಡುಪಿಯ ಸರಕಾರಿ ನೌಕರಿಯಲ್ಲಿದ್ದುಕೊಂಡು ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದರು. ಅರವತ್ತು ಕಾದಂಬರಿಗಳು, ಐನೂರು ಬರಹಗಳು ಎಂಟು ನಾಟಕಗಳು, ನೂರಾರು ಕವನಗಳು, ಅನೇಕಾನೇಕ ಬರಹಗಳು ಹೀಗೆ ಬಹುಸಂಖ್ಯೆಯಲ್ಲಿ ಕೃತಿ ರಚಿಸಿ ಪತ್ರಿಕೆಗಳಲ್ಲಿ, ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಒಲಿದು ಬಂದವಳು (ಕಾ) ಸಂಭಾವಿತ (ಕ) ಅಮೃತ ಹೃದಯ (ನಾ) ರೇಷ್ಮೆ ಸೀರೆ (ನಾ) ಮುಂತಾದವು ಇವುಗಳಲ್ಲಿ ಮುಖ್ಯವಾಗಿವೆ. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿಗಳೂ ಸೇರಿದಂತೆ ಹಲವು ಸಂಸ್ಥೆಗಳು ಉಡುಪರನ್ನು ಸನ್ಮಾನಿಸಿವೆ. ತಮ್ಮ ೭೦ನೇ ವಯಸ್ಸಿನಲ್ಲಿ ಈಚೆಗೆ ನಿಧನರಾದ ಉಡುಪರು ವೆಂಕಟೇಶನ ಮಹಿಮೆಯನ್ನು ಭಕ್ತಿಪೂರ್ವಕವಾಗಿ ಸಾರುವ ಲಕ್ಷ್ಮೀ ಶ್ರೀನಿವಾಸ ಎಂಬ ಪೌರಾಣಿಕ ಕಾದಂಬರಿಯನ್ನು ರಚಿಸಿದ್ದಾರೆ.

ಮೈಸೂರಿನವರಾದ ಶ್ರೀ ಜನಾರ್ದನ ಗುರ್ಕಾರ್ ಕನ್ನಡದ ಪ್ರಸಿದ್ಧ ಸಾಹಿತಿಗಳಲ್ಲೊಬ್ಬರು. ಪರಾವಲಂಬಿ, ಕೈಮಾಂಸ, ಗಂಗಾವತಾರ, ದೃಷ್ಟಿಹೀನ ಮುಂತಾಗಿ ಹದಿನೈದಕ್ಕೂ ಹೆಚ್ಚು ಕಾದಂಬರಿಗಳನ್ನೂ ಸಣ್ಣಕಥೆ, ಲಲಿತ ಪ್ರಬಂಧಗಳನ್ನಲ್ಲದೆ ಅನುವಾದ ಕೃತಿಗಳನ್ನೂ ನೀಡಿರುವ ಗುರ್ಕಾರ್ ಯೋಗವಾಸಿಷ್ಠ ಪುರಾಣವನ್ನು ಆಧರಿಸಿ ಬರೆದ 'ಚೂಡಾಲಾ' ಎಂಬ ಪೌರಾಣಿಕ ಕಾದಂಬರಿ ಮೌಲ್ಯಯುತವಾದ ಗಂಭೀರ ಕೃತಿಯಾಗಿದೆ.

**ಅದಮ್ಯ** ಎಂಬೊಂದು ಕಿರು ಕಾದಂಬರಿಯನ್ನು ರಚಿಸುವ ಮೂಲಕ ಪೌರಾಣಿಕ ಕಾದಂಬರಿಕಾರರ ಸಾಲಿಗೆ ಸೇರಿದವರು ಶ್ರೀ.ಜ.ಹೊ. ನಾರಾಯಣ ಸ್ವಾಮಿ. ಹಾಸನದಲ್ಲಿ ವಕೀಲಿ ವೃತ್ತಿ ನಡೆಸುತ್ತಿರುವ ಶ್ರೀ.ಸ್ವಾಮಿ ಪ್ರಖರ ವಿಚಾರವಾದಿಗಳು, ಪ್ರಗತಿಪರ ಹೋರಾಟಗಾರರು. 'ವೇದ ಕುರಾನ್ ಆಚೆಗೆ', 'ವಿವೇಕಾನಂದರ ಕ್ರಾಂತಿಕಾರಿ ವಿಚಾರಗಳು' ಕೃತಿಗಳ ಮೂಲಕ ವೈಚಾರಿಕತೆಯನ್ನು ಮೆರೆದಿರುವ ಸ್ವಾಮಿ ಕವಿ, ನಾಟಕಕಾರರು ಹೌದು. 'ಜಗದ ತೊಟ್ಟಿಲು', ಅವರ ಕವನ ಸಂಕಲನ. 'ನರಬಲಿ' ನಾಟಕ. ಹರ್ಮನ್ ಹೆಸ್ ನ 'ಸಿದ್ಧಾರ್ಥ' ಕಾದಂಬರಿಯನ್ನು ಕನ್ನಡಕ್ಕೆ ತರ್ಜುಮೆ ಮಾಡಿದ್ದಾರೆ. ಆದಮ್ಯ ಏಕಲವ್ಯನ ದುರಂತ ಕಥೆಯನ್ನು ಒಳಗೊಂಡಿರುವ ಕಿಡಿಯಂಥ ಕಾದಂಬರಿ.

ಶ್ರೀಮತಿ ದೇವಕಿ ಮೂರ್ತಿ ಸಂಗೀತ, ಹಿಂದಿ, ಹೊಲಿಗೆ ಮುಂತಾದ ಮಹಿಳೆಯರ ಸಾಮಾನ್ಯ ಹವ್ಯಾಸಗಳೊಂದಿಗೆ ಸಾಹಿತ್ಯ ರಚನೆಯನ್ನು ರೂಢಿಸಿಕೊಂಡ ಮೈಸೂರಿನ ಲೇಖಕಿ. ಹರಟೆ, ಕಥೆ, ಕಾದಂಬರಿಗಳನ್ನು ಬರೆದಿರುವ ಇವರ 'ಉಪಾಸನೆ' ಕಾದಂಬರಿ ಚಲನಚಿತ್ರವಾಗಿ ಪ್ರಸಿದ್ಧಿ ಪಡೆದಿದೆ, ಒಡಕುದೋಣಿ, ಬಳ್ಳಿಚಿಗುರಿತು, ಎರಡು ದಾರಿ, ಮುಂತಾದವು ಇತರ ಕಾದಂಬರಿಗಳು, ಕೈಕೆಯ ಪಾತ್ರವೇ ಕೇಂದ್ರವಾಗುಳ್ಳ 'ನಿರೀಕ್ಷೆ' ಅವರು ಪೌರಾಣಿಕ ಕಾದಂಬರಿ ಕ್ಷೇತ್ರಕ್ಕೆ ನೀಡಿದ ಕೊಡುಗೆ.

'ಪರೀಕ್ಷಿತ'ದ ಕರ್ತೃ ಸಾಗರದ ಪ್ರಾಧ್ಯಾಪಕ ಎಸ್.ಜಿ.ರಘುಪತಿ ಜೋಯ್ಸ್, 'ವಿಶ್ವರಥ'ದ ರಚನಾಕಾರ ಎಂ.ಬಲರಾಮ್, ಇನ್ನೊಂದು 'ಅಹಲ್ಯೆ'ಯ ಸೃಷ್ಟಿಕರ್ತೆ ಶಕುಂತಲಾ ಭಟ್, 'ಕೃಷ್ಣಾವತಾರ'ದ ಚಂದ್ರಶೇಖರ ಹರ್ಳೆ, 'ಗೋವರ್ಧನ', 'ವ್ಯಾಸ' ಎಂಬೆರಡು ಕಾದಂಬರಿಗಳ ಲೇಖಕ ಕೆ. ಗಣೇಶ ಮಲ್ಯ 'ನೈಷದ ಚಕ್ರವರ್ತಿ' ಯನ್ನು ಚಿತ್ರಿಸಿದ ಸಾರಂಗ, ಹುಬ್ಬಳ್ಳಿ ಕಡೆಯ ಜೋಗ, ಕಾಶೀನಾಥ ರಾಮಚಂದ್ರ ಕುರಡೀಕೇರಿ ಹೀಗೆ ಇನ್ನೂ ಕೆಲವರು ಈ ಕ್ಷೇತ್ರದಲ್ಲಿ ಕೆಲಸ ಮಾಡಿ ಕನ್ನಡ ಸಾಹಿತ್ಯ ಚರಿತ್ರೆಯ ಪುಟಗಳಲ್ಲಿ ಎಡೆ ಪಡೆದಿದ್ದಾರೆ.

**ಪರಿಸಮಾಪ್ತಿ**

ವ್ಯಾಪ್ತಿ, ಪ್ರಮಾಣಗಳಲ್ಲಿ ಚರಿತ್ರೆಗೆ ಬೇಕಾಗುವಷ್ಟು ವಿಸ್ತಾರವನ್ನು ಹೊಂದಿರದೆ ಇದ್ದರೂ-ಸುಮಾರು ಐವತ್ತು ವರ್ಷಾವಧಿಯಲ್ಲಿ ಅಷ್ಟೇ ಸಂಖ್ಯೆಯ ಕೃತಿಗಳು-ಕನ್ನಡ ಪೌರಾಣಿಕ ಕಾದಂಬರಿಗಳು ಗುಣ ಗಾತ್ರಗಳಲ್ಲಿ ದೊಡ್ಡವಾಗಿವೆ. ಮಹಾಕ್ಷತ್ರಿಯ, ಅವಧೇಶ್ವರಿಗಳು ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಪಡೆದಿವೆ. ಮಾಧವಿ, ಸೀತೆ-ರಾಮ-ರಾವಣ, ಪರ್ವ, ಅದಮ್ಯ, ಸಂಚು, ದ್ರೌಪದಿಯಂಥ ಕೃತಿಗಳು ಕನ್ನಡ ಜನರ ವೈಚಾರಿಕ ಪ್ರಜ್ಞೆಯನ್ನು ಬಡಿದೆಬ್ಬಿಸಿ ಸಂಪ್ರದಾಯ ಶ್ರದ್ಧೆಗೆ ಮುಖಾಮುಖಿಯಾಗಿಸಿ ಮಥನಕ್ಕೆ ಅನುವಾಗಿಸಿವೆ. ಮಹಾ ಬ್ರಾಹ್ಮಣ, ಶ್ರೀ ಕೃಷ್ಣದರ್ಶನ, ಊರ್ಮಿಳೆ, ಅಹಲ್ಯೆ, ಅಗ್ನಿವರ್ಣ, ಪರೀಕ್ಷಿತ ಮುಂತಾದ ಕಾದಂಬರಿಗಳು ಆನಂದಸ್ವಾದನೆಯೊಂದಿಗೆ ಜ್ಞಾನೋದ್ದೀಪನಕ್ಕೂ ಅವಕಾಶ ನೀಡಿವೆ. ಹೀಗೆ ಕನ್ನಡ ಕಾದಂಬರೀ ಇತಿಹಾಸದ ಪುಟಗಳಲ್ಲಿ ಸುವರ್ಣ ರೇಖೆಯಂತೆ ಮಿರುಗುತ್ತಾ ಈ ಕೃತಿಗಳು ನಮ್ಮ ಕಥಾ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಇಂತಹ ವೈಶಿಷ್ಟ್ಯ ಪೂರ್ಣ ಮತ್ತು ಸತ್ವಪೂರ್ಣ ಕೃತಿಗಳನ್ನು ರಚಿಸುವ ಮೂಲಕ ಈ ಪ್ರಕಾರಕ್ಕೆ ಗಟ್ಟಿ ನೆಲೆಗಟ್ಟನ್ನು ಹಾಕಿಕೊಟ್ಟಿರುವ ದೇವುಡು, ಸತ್ಯಕಾಮ, ಸಮೇತನಹಳ್ಳಿ, ಭೈರಪ್ಪ, ಪುಣೇಕರ, ಸಾವಿತ್ರಮ್ಮ, ತೊರಗಲ್ಲು, ಪ್ರಭಾವತಿಯವರಂಥ ಪೌರಾಣಿಕ ಕಾದಂಬರಿಕಾರರು ಸಾಹಿತ್ಯ ಚರಿತ್ರೆಯಲ್ಲಿ ಸ್ಥಾಯಿಯಾಗಿದ್ದಾರೆ, ಕನ್ನಡಿಗರ ಕೃತಜ್ಞತೆಗೆ ಅರ್ಹರಾಗಿದ್ದಾರೆ.

***